بِسْمِ اللهِ الرَّحْمٰنِ الرَّحِيْمِ   نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ   وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 24

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

13 ಜೂನ್ 2024, 13 ಇಹ್‌ಸಾನ್ 1403 ಹಿಜರಿ ಶಮ್‌ಸಿ,
06 ಝುಲ್-ಹಜ್ಜ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِىْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

فَمَنْ اَظْلَمُ مِمَّنِ افْتَرٰى
عَلَى اللّٰهِ كَذِبًا اَوْ كَذَّبَ بِاٰيٰتِهٖ ؕ
اِنَّهٗ لَا يُفْلِحُ الْمُجْرِمُوْنَ ﴿۱۸﴾

**(ಸೂರಃ ಯೂನುಸ್: 18)**

**ಅಂದರೆ: ಅಲ್ಲಾಹನ ನಾಮದಲ್ಲಿ ಸುಳ್ಳು ಸೃಷ್ಟಿಸುವವನಿಗಿಂತ ಅಥವಾ ಅವನ ದೃಷ್ಟಾಂತಗಳನ್ನು ಸುಳ್ಳಾಗಿಸುವವನಿಗಿಂತ ದೊಡ್ಡ ಅತಿಕರ್ಮಿ ಬೇರೆ ಯಾರು? ಖಂಡಿತವಾಗಿಯೂ ಅಪರಾಧಿಗಳು ವಿಜಯಗಳಿಸಲಾರರು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸುಳ್ಳು ಸಾಕ್ಷಿಯ ಮೂಲಕ ಇನ್ನೊಬ್ಬರ ಆಸ್ತಿಯನ್ನು ಪಡೆದುಕೊಳ್ಳುವ ವ್ಯಕ್ತಿಯು ಅಲ್ಲಾಹನನ್ನು ಎಂತಹ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ ಅಂದರೆ ಅಲ್ಲಾಹನು ಆತನಿಂದ ಬೇಸರಗೊಂಡಿರುವನು

**(2416-17)** ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: "ಯಾರು ಪ್ರಮಾಣ ವಚನ ಸ್ವೀಕರಿಸುತ್ತಾರೋ ಅವರು ಅದರಲ್ಲಿ ಸುಳ್ಳುಗನಾಗಿದ್ದರೆ, ಮತ್ತು ಇದರ ಮೂಲಕ ( ಪ್ರಮಾಣ) ಓರ್ವ ಮುಸಲ್ಮಾನನ ಆಸ್ತಿಯು ಪಡೆದುಕೊಂಡರೆ. ಆತನು ಅಲ್ಲಾಹನನ್ನು ಆತನ ಮೇಲೆ ಕೋಪಗೊಂಡಿದುವ ಸ್ಥಿತಿಯಲ್ಲಿ ಭೇಟಿಯಾಗುತ್ತಾನೆ. ಹಝ್ರತ್ ಅಶ್‌ಅಸ್(ರ) ಹೇಳುತ್ತಿದ್ದರು: ಅಲ್ಲಹನ ಆಣೆ!! ಈ ಮಾತನ್ನು ಹಝ್ರತ್ ಪೈಗಂಬರ್(ಸ) ರವರು ನನ್ನ ಬಗ್ಗೆಯೇ ಹೇಳಿರುವರು. (ಘಟನೆ ಹೀಗಿತ್ತು) ನನ್ನ ಮತ್ತು ಓರ್ವ ಯಹೂದಿಯ ಒಮದು ಭೂಮಿ ಇತ್ತು ಆತನು (ಯಹೂದಿ) ನನ್ನನ್ನು ಆ ಭೂಮಿಯಲ್ಲಿ ಹಕ್ಕಿಲ್ಲ ಎಂದು ನಿರಾಕರಿಸಿದನು. ಆದ್ದರಿಂದ ನಾನು ಹಝ್ರತ್ ಪೈಗಂಬರ್(ಸ) ರವರ ಬಳಿ ಹೋದಾರ ರಸೂಲುಲ್ಲಾಹ್(ಸ) ರವರು ನನಗೆ ಕೇಳಿದರು: ನಿಮ್ಮ ಬಳಿ ಏನಾದರೂ ಪುರಾವೆಗಳಿವೆಯೇ? ಅದಕ್ಕೆ ನಾನು ಹೇಳಿದೆ: ಇಲ್ಲ (ಹಝ್ರತ್ ಅಶ್‌ಅಸ್) ಹೇಳುತ್ತಿದ್ದರು: ನೀವು(ಸ) ಆ ಯಹೂದಿಗೆ ಪ್ರಮಾಣ ಮಾಡಿ ಹೇಳಲು ಹೇಳಿದರು. ಅದಕ್ಕೆ (ಹಝ್ರತ್ ಅಶ್‌ಅಸ್) ಹೇಳುತ್ತಾರೆ: ಯಾ ರಸೂಲಲ್ಲಾಹ್! ಅವನು ಪ್ರಮಾಣ ಮಾಡುತ್ತಾನೆ ಮತ್ತು ನನ್ನ ಸಂಪತ್ತು ಹೋಗುತ್ತದೆ, ಆಗ ಸರ್ವಶಕ್ತನಾದ ಅಲ್ಲಾಹನು ಈ ವಚನವನ್ನು ಅವತರಿಸಿದನು: ಅಲ್ಲಾಹನ ಒಪ್ಪಂದ ಮತ್ತು ಅವರ ಪ್ರಮಾಣಗಳಿಗೆ ಪ್ರತಿಯಾಗಿ ಸಣ್ಣ ಮೊತ್ತವನ್ನು ತೆಗೆದುಕೊಳ್ಳುವವರು. (ಸಹೀಹ್ ಬುಖಾರಿ, ಸಂಪುಟ 4, ಕಿತಾಬ್ ಅಲ್-ಖುಸುಮಾತ್, 2008 ಖಾದಿಯಾನ್ ಪ್ರಕಟಿತ)

## ಪವಿತ್ರ ಖುರ್‌ಆನ್ ಅನ್ನು ಕಡೆಗಣಿಸಿ ಅನ್ಯ ಪುಸ್ತಕಗಳ ಮೇಲೆ ಒಲವು ತೋರುವವನು ಬಹಳ ವಿಶ್ವಾಸದ್ರೋಹಿಯಾಗಿದ್ದಾನೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ನಮ್ಮ ಬಳಿ ಪವಿತ್ರ ಖುರ್‌ಆನ್ ಇಲ್ಲದಿರುತ್ತಿದ್ದರೆ, ಹದೀಸ್‌ಗಳು ಮಾತ್ರ ನಮ್ಮ ವಿಶ್ವಾಸದ ನಂಬಿಕೆಗೆ ಆಧಾರವಾಗಿರುತ್ತಿದ್ದರೆ ನಾವು ಅನ್ಯ ಸಮುದಾಯಗಳ ಮುಂದೆ ತಲೆತಗ್ಗಿಸುವಂತಾಗುತ್ತಿತ್ತು. ನಾನು "ಖುರ್‌ಆನ್" ಪದದ ಮೇಲೆ ಗಾಂಭೀರ್ಯದಿಂದ ಯೋಚಿಸಿದ್ದೇನೆ, ಆಗ ಈ ಅನುಗ್ರಹದಾಯಕ ಪದದಲ್ಲಿ ಒಂದು ಅದ್ಭುತವಾದ ಭವಿಷ್ಯವಾಣಿಯಿದೆ ಎಂದು ನನಗೆ ಅರ್ಥವಾಯಿತು. ಅದೇನೆಂದರೆ ಈ ಪವಿತ್ರ ಖುರ್‌ಆನ್ ಓದಲು ಯೋಗ್ಯವಾದ ಪುಸ್ತಕವಾಗಿದೆ ಮತ್ತು ಮುಂದೊಂದು ಯುಗದಲ್ಲಿ ಇದು ಇನ್ನೂ ಹೆಚ್ಚು ಓದಲು ಯೋಗ್ಯವಾದ ಪುಸ್ತಕವಾಗುವುದು. ಅದಾಗ್ಯೂ, ಇನ್ನು ಇತರ ಪುಸ್ತಕಗಳು ಅದರ ಜೊತೆಗೆ ಸೇರುವುದು, ಆ ಸಮಯದಲ್ಲಿ, ಇಸ್ಲಾಮಿನ ಘನತೆ, ಗೌರವವನ್ನು ರಕ್ಷಿಸಲು ಮತ್ತು ಇತರರ ಸುಳ್ಳನ್ನು ಬಯಲು ಮಾಡಲು ಈ ಒಂದು ಪುಸ್ತಕ ಮಾತ್ರ ಓದಲು ಯೋಗ್ಯವಾಗಿರುವುದು ಮತ್ತು ಇತರ ಪುಸ್ತಕಗಳು ಖಂಡಿತವಾಗಿಯೂ ತ್ಯಜಿಸಲು ಯೋಗ್ಯವಾಗಿರುವುದು. ಫುರ್ಖಾನ್ ಕೂಡ ಅದೇ ಅರ್ಥವನ್ನು ಹೊಂದಿದೆ, ಅಂದರೆ, ಈ ಒಂದು ಪುಸ್ತಕವು ಸತ್ಯ ಮತ್ತು ಸುಳ್ಳಿನ ನಡುವೆ ವ್ಯತ್ಯಾಸವನ್ನು ತೋರಿಸುತ್ತದೆ ಮತ್ತು ಯಾವುದೇ ಹದೀಸ್ ಪುಸ್ತಕ ಅಥವಾ ಯಾವುದೇ ಇತರ ಪುಸ್ತಕವು ಇದಕ್ಕೆ ಸಾಟಿ ಆಗಲಾರರು. (ಅವರು ಬಹಳ ಉತ್ಸಾಹದಿಂದ ಮತ್ತು ಒತ್ತಿ ಹೇಳಿದರು) ಈಗ ಎಲ್ಲಾ ಪುಸ್ತಕಗಳನ್ನು ಬಿಟ್ಟುಬಿಡಿರಿ ಮತ್ತು ಅಲ್ಲಾಹನ ಈ ಪುಸ್ತಕವನ್ನು ಹಗಲಿರುಳು ಓದಿ. ಪವಿತ್ರ ಖುರ್‌ಆನ್ ಅನ್ನು ಕಡೆಗಣಿಸಿ ಅನ್ಯ ಪುಸ್ತಕಗಳ ಮೇಲೆ ಒಲವು ತೋರುವವನು ಬಹಳ ವಿಶ್ವಾಸದ್ರೋಹಿಯಾಗಿದ್ದಾನೆ. ನಮ್ಮ ಜಮಾಅತಿನ ಒಲವು ಮತ್ತು ಗಮನ ಪವಿತ್ರ ಖುರ್‌ಆನ್‌ನಲ್ಲೇ ಮನಃಪೂರ್ವಕವಾಗಿ ವಾಲಿರಬೇಕು. ಮತ್ತು ಹದೀಸ್‌ಗಳನ್ನು ಓದುವ ಕಡೆ ಹೆಚ್ಚಿನ ಗಮನ ಸಲ್ಲದು. ಆಶ್ಚರ್ಯದ ಸಂಗತಿಯೇನೆಂದರೆ ಪವಿತ್ರ ಖುರ್‌ಆನ್‌ಗೆ ನೀಡಬೇಕಾದಂತಹ ಒಲವು ಆದ್ಯತೆ ಹದೀಸ್‌ಗಳಿಗೆ ನೀಡಲಾಗುತ್ತದೆ. ಇದೇಗ ಪವಿತ್ರ ಖುರ್‌ಆನ್‌ನ ಆಯುಧವನ್ನು ನಿಮ್ಮ ಕೈಯಲ್ಲಿ ತೆಗೆದುಕೊಂಡರೆ, ನೀವು ವಿಜಯಶಾಲಿಯಾಗುತ್ತೀರಿ. ಈ ದಿವ್‌ಪ್ರಕಾಶದ ಮುಂದೆ ಯಾವ ಅಂಧಕಾರವೂ ನಿಲ್ಲಲಾರದು.

**(ಮಲ್‌ಫೂಝಾತ್ ಸಂಪುಟ-2, ಪುಟ-9, 2018 ಖಾದಿಯಾನ್)**

## ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಮಾನವರಿಗೆ ಗೌರವವನ್ನು ನೀಡಿದ್ದಾನೆ ಮತ್ತು ವಿಶೇಷ ಸಮೂದಾಯಗಳಿಗೆ ಅಲ್ಲ, ಆದ್ದರಿಂದ ಸಮೂದಾಯಗಳು ಪರಸ್ಪರರ ಬಗ್ಗೆ ಹೆಮ್ಮೆಪಡಬಾರದು.

ಸೈಯ್ಯಿದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಾ ಬನೀ ಇಸ್ರಈಲ್‌ನ ಆಯತ್ 71 **ವಲಖದ್ ಕರ್ರಮ್‌ನಾ ಬನೀ ಆದಮ ವಹಮಲ್‌ನಾಹುಮ್ ಫಿದ್ದುಬುರಿ ವಲ್‌ಫಜ್‌ರಿ ವರಝಖ್‌ನಾಹುಮ್ ಮಿನತ್ತೈಯಿಬಾತಿ ವ ಫಝ್ಝಲ್‌ನಾಹುಮ್ ಅಲಾ ಕಸೀರಿಮ್ಮಿಮ್ಮನ್ ಖಲಖ್‌ನಾ ತಫ್‌ಝೀಲ** ನ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ:

ಈ ಆಯತ್‌ನಲ್ಲಿ ಹೇಳಿರುವುದೆನೆಂದರೆ ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಮಾನವರಿಗೆ ಗೌರವವನ್ನು ನೀಡಿದ್ದಾನೆ ನಿರ್ದಿಷ್ಟ ಸಮೂದಾಯಗಳಿಗೆ ಅಲ್ಲ, ಆದ್ದರಿಂದ ಸಮೂದಾಯಗಳು ಪರಸ್ಪರರ ಬಗ್ಗೆ ಹೆಮ್ಮೆಪಡಬಾರದು. ತಮ್ಮನ್ನು ಇತರರಿಗಿಂತ ಹೆಚ್ಚು ಗೌರವಾನ್ವಿತರು ಎಂದು ಪರಿಗಣಿಸಿದ ಯಹೂದಿಗಳು ಮತ್ತು ಖುರೈಶ್‌ಗಳಿಗೆ ಸಲಹೆ ನೀಡಲಾಗಿದೆ ಮತ್ತು ಸರ್ವಶಕ್ತನಾದ ಅಲ್ಲಾಹನು ಪ್ರತಿ ಸಮೂದಾಯಕ್ಕೂ ಗೌರವವನ್ನು ನೀಡಿದ್ದಾನೆ ಎಂದು ತಿಳಿಸಲಾಗಿದೆ, ಆದರೆ ಕೆಲವು ಸಮೂದಾಯಗಳು ಈ ಗೌರವದಿಂದ ಪ್ರಯೋಜನ ಪಡೆದುಕೊಲ್ಳುವುದಿಲ್ಲ ಮತ್ತು ಸರ್ವಶಕ್ತನಾದ ಅಲ್ಲಾಹನು ತೆರೆದ ಮಾರ್ಗಗಳನ್ನು ತಮ್ಮ ಮೇಲೆ ಬಂದು ಮಾಡಿಕೊಳ್ಳುತ್ತಾರೆ. **ವಹಮಲ್‌ನಾಹುಮ್ ಫಿಲ್ ಬರ್ರಿ ವಲ್ ಬಹರ್** ಎಂದು ಹೇಳುವ ಮೂಲಕ ಮಾನವ ಅಭಿವೃದ್ಧಿಗಾಗಿ ಸಮುದ್ರ ಮತ್ತು ಭೂಮಿಯುನ್ನು ಅಲ್ಲಾಹನು ಸಮಾನವಾಗಿ ನೇಮಿಸಿದ್ದಾನೆ ಎಂದು ಸೂಚಿಸಲಾಗಿದೆ. ಆದ್ದರಿಂದ ಒಂದು

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಮನುಷ್ಯರ ಜೀವಕ್ಕೆ ಹಝ್ರ‌ತ್ ಪೈಗಂಬರ್(ಸ) ನೀಡುತ್ತಿದ್ದ ಬೆಲೆಯ ಮಟ್ಟವೇನೆಂದರೆ, ಶತ್ರು ಗೋತ್ರದ ಜನರ ಜೀವವನ್ನು ಕೂಡ ರಕ್ಷಿಸಲಿಕ್ಕಾಗಿ ಪಿತೂರಿ ಉಂಟುಮಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ಮಾತ್ರ ಕೊಲ್ಲಲು ಅವರು ಯೋಜನೆ ಹಾಕಿದರು. ಇದು ಮಾನುಷಿಕ ಸಹಾನುಭೂತಿಯ ಅತ್ಯುನ್ನತ ಮಟ್ಟವಾಗಿದೆ.

ಹಝ್ರ‌ತ್ ಪೈಗಂಬರ್(ಸ) ಭಾಗಿಯಾಗಿರದೇ ಇತರರನ್ನು ಕಳುಹಿಸಲಾಗುವ ಕಾರ್ಯಾಚರಣೆಯನ್ನು 'ಸರಿಯ' ಎಂದು ಕರೆಯಲಾಗುತ್ತದೆ.

ಸುಫ್ಯಾನ್ ಬಿನ್ ಖಾಲಿದ್ ಮದೀನದ ಮೇಲೆ ದಾಳಿ ಮಾಡಲು ಸೈನ್ಯವನ್ನು ಒಟ್ಟುಗೂಡಿಸಿದ್ದಾನೆ ಎಂದು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿದಾಗ, ಅವರು ಸೈನ್ಯವನ್ನು ಸಿದ್ಧಪಡಿಸುವ ಬದಲು ಮತ್ತು ಸುಫ್ಯಾನ್ ವಿರುದ್ಧ ಹೋರಾಡಲು ಕಳುಹಿಸುವ ಒಂದು ಅನನ್ಯ ಮತ್ತು ಬುದ್ಧಿವಂತಿಕೆಯ ನಿರ್ಧಾರವನ್ನು ಮಾಡಿದರು. ಮತ್ತು ಎರಡೂ ಕಡೆಗಳಲ್ಲಿ ರಕ್ತಪಾತ ಆಗಬಹುದು ಎಂದು ಆ ಬಂಡಾಯ ಸೈನ್ಯವನ್ನು ರಚಿಸಿದ ಸಂಸ್ಥಾಪಕನನ್ನು ವಧಿಸುವುದು ಸೂಕ್ತವೆಂದು ಪರಿಗಣಿಸಿ ಯುಕ್ತಿಯ ಕಾರ್ಯವನ್ನು ಕೈಗೊಂಡರು.

ಹಝ್ರತ್ ಅಬ್ದುಲ್ಲಾ ಬಿನ್ ಉನೈಸ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ.ಅ) ಸುಫ್ಯಾನ್ ಬಿನ್ ಖಾಲಿದ್‌ನ ಬಗ್ಗೆ ನನಗೆ ತಿಳಿಸಿದ್ದಕ್ಕಾಗಿ, ನಾನು ಆತನನ್ನು ತಕ್ಷಣ ಗುರುತಿಸಿಕೊಂಡೆ. ಏಕೆಂದರೆ ನಾನು ಆತನನ್ನು ನೋಡಿದ ತಕ್ಷಣ ನನಗೆ ಭಯವುಂಟಾಯಿತು ಮತ್ತು ನಾನು ಯಾರಿಗೂ ಹೆದರುತ್ತಿರಲಿಲ್ಲ. ಹೀಗೆ ನಾನು ನನ್ನ ಹೃದಯದಲ್ಲಿ ಹೇಳಿದೆ, ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಸತ್ಯವನ್ನು ಹೇಳಿದ್ದಾರೆ.

**ಸರಿಯ ಹಝ್ರತ್ ಅಬೂಸಲಮ(ರ), ಸರಿಯ ಅಬ್ದುಲ್ಲಾ ಬಿನ್ ಉನೈಸ್(ರ) ಮತ್ತು ಸರಿಯಾ ರಜೀಅ್‌ಯ ಬೆಳಕಿನಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಪರಿಶುದ್ಧ ಜೀವನಚರಿತ್ರೆಯ ವಿಶ್ವಾಸ ವರ್ಧಕ ಪ್ರಸ್ತಾವನೆ**

ಯೆಮನ್ ಹಾಗೂ ಪಾಕಿಸ್ತಾನದಲ್ಲಿ ಅಹ್ಮದಿಯರಿಗೆ ಸೆರೆಯಲ್ಲಿರಿಸಲಾಗಿದೆ ಅವರಿಗಾಗಿ ಹಾಗೂ ಪೆಲಸ್ತೀನಿನ ಪೀಡಿತರಿಗಾಗಿ ದುಆ ಮಾಡುತ್ತಾ ಇರಿ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **10-05-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

إِيَّاكَ نَعْبُدُ وَإِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಇಂದು ಹಝ್ರ‌ತ್ ಪೈಗಂಬರ್(ಸ)ರ ಕಾಲದ ಕೆಲವು ಯುದ್ಧಗಳ ಪ್ರಸ್ತಾಪ ಮಾಡುತ್ತೇನೆ. ಈ ಸಂಬಂಧವಾಗಿ ಮೊತ್ತಮೊದಲಾಗಿ ಬನೂ ಅಸದ್ ಗೋತ್ರದ ಪಿತೂರಿ ಮತ್ತು 'ಸರಿಯ ಅಬೂಸಲ್ಮಾ'ದ ಕಾರ್ಯಾಚರಣೆಯ ಪ್ರಸ್ತಾಪ ಮಾಡಲಾಗುವುದು. ಹಝ್ರ‌ತ್ ಪೈಗಂಬರ್(ಸ) ಭಾಗಿಯಾಗಿರದೇ ಇತರರನ್ನು ಕಳುಹಿಸಲಾಗುವ ಕಾರ್ಯಾಚರಣೆಯನ್ನು 'ಸರಿಯ' ಎಂದು ಕರೆಯಲಾಗುತ್ತದೆ. ಅದರಲ್ಲೂ ಹಝ್ರ‌ತ್ ಪೈಗಂಬರ್(ಸ)ರ ಜೀವಿತದ ಕೆಲವು ಮಗ್ಗುಲುಗಳ, ಅವರ ಯುಕ್ತಿಯ, ಮುಸ್ಲಿಮರ ಪ್ರತಿರೋಧದ ವಿಧಾನ, ಶತ್ರುಗಳೊಂದಿಗೆ ಸಹಾನುಭೂತಿ ಮತ್ತು ಹಝ್ರತ್ ಪೈಗಂಬರ್(ಸ)ರ ಮಾದರಿಯ ಬಗ್ಗೆ ಬೆಳಕು ಚೆಲ್ಲುತ್ತದೆ. ಆದಾಗ್ಯೊ ಸರಿಯ ಅಬೂಸಲ್ಮಾ 4 ಹಿಜರೀ, ಮುಹರ್ರಮ್ ತಿಂಗಳಲ್ಲಿ ಹಝ್ರ‌ತ್ ಅಬೂಸಲ್ಮಾ ಬಿನ್ ಅಬ್ದುಲ್‌ಅಸದ್ ಮಖ್ಝ್‌ಝೂಮಿಯ ನೇತೃತ್ವದಲ್ಲಿ ನಡೆಯಿತು. (ಸೀರ'ತ್ ಇನ್ಸೈಕ್ಲೋಪೀಡಿಯಾ, ಸಂಪುಟ-6, ಪುಟ-424, ದಾರುಸ್ಸಲಾಮ್ ರಿಯಾಧ್, 1434 ಹಿಜರಿ)

ಅಬೂಸಲಮ(ರ) ರವರ ಹೆಸರು ಅಬ್ದುಲ್ಲಾ ಎಂದಾಗಿತ್ತು ಮತ್ತು ಅಬೂಸಲಮ ಅವರ ಬಿರುದಾಗಿತ್ತು. ಅವರ ತಾಯಿಯ ಹೆಸರು ಬರ್‍ರಹ್ ಬಿನ್ತ್ ಅಬ್ದುಲ್ ಮುತಲ್ಲಿಬ್ ಎಂದಾಗಿತ್ತು ಅವರು ಹಝ್ರ‌ತ್ ಪೈಗಂಬರ್(ಸ)ರ ತಂದೆಯ ಸಹೋದರಿ ಪುತ್ರ ಮತ್ತು ಹಝ್ರ‌ತ್ ಹಂಝ್ರ(ರ)ರ ಮಲತಾಯಿ ಸಹೋದರ ಆಗಿದ್ದರು. ಅವರು ಅಬೂಲಹಬ್‌ನ ದಾಸಿಯಾದ ಸುವೈಬಃ ಎಂಬವರ ಹಾಲು ಕುಡಿದಿದ್ದರು. ಹಝ್ರ‌ತ್ ಉಮ್ಮುಲ್ ಮುಮಿನೀನ್ ಉಮ್ಮೆ ಸಲ್ಮಾ(ರ) ಮೊದಲು ಅವರ ನಿಕಾಹ್‌ದಲ್ಲಿದ್ದರು. (ಅಸದುಲ್ ಗಾಬ, ಸಂಪುಟ-3, ಪುಟ-295, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಅಬೂಸಲ್ಮಾ(ರ)ರವರು ಬದ್ರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗಿಯಾಗಿದ್ದರು. ಅವರು ಉಹುದ್ ಯುದ್ಧದಲ್ಲಿ ಗಾಯಗೊಂಡರು. ಒಂದು ತಿಂಗಳ ಕಾಲ ಆತನಿಗೆ ಚಿಕಿತ್ಸೆ ನೀಡಿದ ನಂತರ ಗಾಯವು ವಾಸಿಯಾಯಿತು ಮತ್ತು ಆ ಗಾಯವನ್ನು ಯಾರು ಗುರುತಿಸಲು ಸಾಧ್ಯವಾಗದ ರೀತಿಯಲ್ಲಿ ವಾಸವಾಗಿತ್ತು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-182, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಕಾರ್ಯಾಚರಣೆಯ ಹಿನ್ನೆಲೆ ಹೀಗಿದೆ: ಮುಸ್ಲಿಮರನ್ನು ಬೇಗನೇ ಕೊನೆಗೊಳಿಸಲು ಯೋಜನೆಯನ್ನು ಮಾಡಬಹುದಾಗಿದೆ ಎಂಬ ಯೋಚನೆ ಉಹುದ್ ಯುದ್ಧದ ಅವಸ್ಥೆಗಳು ಮತ್ತು ಘಟನೆಗಳ ಕಾರಣದಿಂದ ಮದೀನದಲ್ಲಿ ನೆಲೆಸಿದ್ದ ಕಪಟವಿಶ್ವಾಸಿಗಳ, ಯಹೂದಿಯರ ಮತ್ತು ಮದೀನದ ಆಸುಪಾಸಿನಲ್ಲಿ ಇದ್ದ ಗೋತ್ರದವರಿಗೆ ಬಂತು. ಅದೇ ರೀತಿ ಬದ್ರ್ ಕದನದಲ್ಲಿ ಮುಸಲ್ಮಾನರ ಮಹಾ ವಿಜಯದಿಂದ ಭಯಭೀತರಾದ ಮದೀನಾದ ಸುತ್ತಮುತ್ತ ವಾಸಿಸುವ ಬುಡಕಟ್ಟು ಜನಾಂಗದವರೂ ಉಹದ್‌ನಲ್ಲಿ ಮುಸ್ಲಿಮರು ಸಾಕಷ್ಟು ಕಷ್ಟಗಳನ್ನು ಅನುಭವಿಸಿದ್ದಾರೆ ಆದ್ದರಿಂದ ಮುಸ್ಲಿಮರ ಮೇಲೆ ದಾಳಿ ನಡೆಸಿ ಅವರಿಗೆ ಇನ್ನಷ್ಟು ಹಾನಿ ಮಾಡಬೇಕೆಂದು ಮತ್ತು ಆ ದಾಳಿಯಿಂದಾಗಿ ಅವರ ಆಸ್ತಿ ಮತ್ತು ಸಂಪತ್ತನ್ನು ಲೂಟಿ ಮಾಡಬಹುದು ಎಂದು ತಮ್ಮ ಹೃದಯದಲ್ಲಿ ಯೋಚಿಸಲು ಪ್ರಾರಂಭಿಸಿದರು. ಆದ್ದರಿಂದ, ಉಹುದ್ ಯುದ್ಧದ ನಂತರ ಕೇವಲ ಎರಡು ತಿಂಗಳ ನಂತರ ಮೊತ್ತಮೊದಲಿಗೆ ಬನೂ ಅಸದ್ ಬಿನ್ ಖಝೀಮ ಗೋತ್ರವು ಮುಸ್ಲಿಮರ ಮೇಲೆ ದಾಳಿ ನಡೆಸಲು ಯೋಜನೆ ಹಾಕಿತು. ಈ ಜನರು ನಜದ್‌ನಲ್ಲಿ ನೆಲೆಸಿದ್ದರು. ಆ ಗೋತ್ರದ ಸರದಾರ ತುಲೈಹ ಬಿನ್ ಖುವೈಲಿದ್ ಮತ್ತು ಆತನ ಸಹೋದರ ಸಲ್ಮಾ ಇಬ್ಬರೂ ಸೇರಿ ಜನರನ್ನು ಒಟ್ಟು ಸೇರಿಸಿ ಒಂದು ಸೇನೆಯನ್ನು ತಯಾರು ಮಾಡಿದರು.

ಮುಸ್ಲಿಮರ ಮೇಲೆ ದಾಳಿ ನಡೆಸದೇ ಇರಲು ಬನೂ ಅಸದಿನ ಒಬ್ಬ ವ್ಯಕ್ತಿಯಾದ ಖೈಸ್ ಬಿನ್ ಹಾರಿಸ್ ಬಿನ್ ಉಮೈರ್ ತನ್ನ ಸಮುದಾಯವನ್ನು ಉಪದೇಶಿಸಿದನು: ಓ ನನ್ನ ಜನರೇ! ಇದು ಜಾಣತನವಲ್ಲ. ಮುಸ್ಲಿಮರಿಂದ ನಮಗೆ ಯಾವುದೇ ನಷ್ಟವಾಗಿಲ್ಲ.

ಮುಸ್ಲಿಮರು ನಮಗೆ ಹಾನಿ ಮಾಡುತ್ತಿಲ್ಲ, ಮತ್ತು ಲೂಟಿಗಾಗಿ ಮುಸ್ಲಿಮರು ನಮ್ಮ ಮೇಲೆ ದಾಳಿಯು ಸಹ ಮಾಡಲಿಲ್ಲ. ನಮ್ಮ ಪ್ರದೇಶವು ಯಸ್ರಬ್‌ನಿಂದ ದೂರದಲ್ಲಿದೆ, ಅಂದರೆ ಮದೀನಾದಿಂದ ದೂರದಲ್ಲಿದೆ. ಖುರೈಷಿಗಳಂತಹ ಸೈನ್ಯವೂ ನಮ್ಮ ಬಳಿ ಇಲ್ಲ. ಖುರೈಷಿಗಳು ಅವರ ವಿರುದ್ಧ ಅರಬ್ಬರನ್ನು ದೀರ್ಘಕಾಲದಿಂದ ಸಹಾಯ ಕೇಳುತ್ತಿದ್ದರು. ಅವರು ಅವರ ಮೇಲೆ ಸೇಡು ತೀರಿಸಿಕೊಳ್ಳಲು ಬಯಸಿದ್ದರು, ನಂತರ ಅವರು ಒಂಟೆಗಳ ಮೇಲೆ ಸವಾರಿ ಮಾಡಿದರು ಮತ್ತು ಕುದುರೆಗಳ ನಿಯಂತ್ರಣವನ್ನು ಪಡೆದರು. ಅವರು ತಮ್ಮೊಂದಿಗೆ ಮೂರು ಸಾವಿರ ಯೋಧರನ್ನು ಮತ್ತು ಹೆಚ್ಚಿನ ಸಂಖ್ಯೆಯ ಅನುಯಾಯಿಗಳನ್ನು ಕರೆದೊಯ್ದರು. ಬಹಳಷ್ಟು ಆಯುಧಗಳನ್ನೂ ವಶಪಡಿಸಿಕೊಂಡಿದ್ದರು. ಅದಕ್ಕೆ ಹೋಲಿಸಿದರೆ ನಿಮ್ಮ ಸ್ಥಾನಮಾನವೇನು? ಒಂದು ವಿಷಯವೆಂದರೆ ನೀವು ಕೇವಲ ಮುನ್ನೂರು ಜನರೊಂದಿಗೆ ಹೋಗುತ್ತೀರಿ, ಹೀಗೆ ನೀವು ನಿಮ್ಮ ಪ್ರದೇಶದಿಂದ ದೂರ ಹೋಗುವುದ್ದರಿಂದ ನಿಮ್ಮನ್ನು ಸ್ವತಃ ನೀವು ಮೋಸಗೊಳಿಸುತ್ತೀರಿ ಮತ್ತು ನೀವು ತೊಂದರೆಗೆ ಸಿಲುಕುತ್ತೀರಿ ಎಂದು ನಾನು ಭಯಪಡುತ್ತೇನೆ, ಆದರೆ ಅವರು ಖೈಸರ ಸಲಹೆಯನ್ನು ತೆಗೆದುಕೊಳ್ಳಲಿಲ್ಲ. ಮತ್ತೊಂದೆಡೆ, ಬನೂ ಅಸದ್ ಮದೀನಾವನ್ನು ಆಕ್ರಮಣ ಮಾಡುವ ಯೋಜನೆಯ ಸುದ್ದಿ ಹಝ್ರತ್ ಪೈಗಂಬರ್(ಸ) ಅವರಿಗೆ ತಲುಪಿತು, ಅಂದರೆ ತೈ ಗೋತ್ರದ ವ್ಯಕ್ತಿಯೊಬ್ಬನು ಮದೀನಾಗೆ ತನ್ನ ಸಹೋದರನ ಪುತ್ರಿ ತಾಲಿಬ್ ಬಿನ್ ಉಮೈರ್ ಬಿನ್ ವಹ್ಬ್ ಅವರ ಪತ್ನಿ ಝೈನಾಬ್ ಅವರನ್ನು ಭೇಟಿಯಾಗಲು ಬಂದನು. ಆತನು ಬನೂ ಅಸದ್‌ನ ಮೇಲಿನ ಯೋಜನೆಯ ಬಗ್ಗೆ ತಿಳಿಸಿದನು, ಈ ದಾಳಿಯ ಬಗ್ಗೆ ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾದಾಗ, ಆ ಗೋತ್ರದವರ ದಾಳಿಗೆ ಮುಂಚಿತವಾಗಿ ಸ್ವತಃ ಮುಸ್ಲಿಮರು ತಮ್ಮ ಸಂರಕ್ಷಣೆಗಾಗಿ ಅವರ ಪ್ರದೇಶದ ಮೇಲೆ ದಾಳಿ ನಡೆಸಲು ಹಝ್ರತ್ ಪೈಗಂಬರ್(ಸ)ರ ತೀರ್ಮಾನಿಸಿದರು. ಆದ್ದರಿಂದ ಅವರು(ಸ) ಹಝ್ರತ್ ಅಬೂಸಲಮ ಬಿನ್ ಅಬ್ದುಲ್ ಅಸದ್(ರ) ಅವರನ್ನು ಕರೆದು ಈ ಕಾರ್ಯಾಚರಣೆಗೆ ಹೋಗುವಂತೆ ಹೇಳಿದರು. ನಾನು ನಿಮ್ಮನ್ನು ಅದರ ರಕ್ಷಕನನ್ನಾಗಿ ನೇಮಿಸಿದ್ದೇನೆ. ಅದರ ನಂತರ, ಹಝ್ರತ್ ಪೈಗಂಬರ್(ಸ)ರು ಅವರಿಗೆ ಧ್ವಜವನ್ನು ನೀಡಿದರು ಮತ್ತು ಅವರ ಪಡೆಗಳು ನಿಮ್ಮ ವಿರುದ್ಧ ಒಟ್ಟುಗೂಡುವ ಮೊದಲು ಬನೂ ಅಸದ್ ಪ್ರದೇಶಕ್ಕೆ ತಮ್ಮ ಪ್ರಯಾಣವನ್ನು ಮುಂದುವರಿಸಿ ಅಲ್ಲಿ ತಲುಪಿದ ನಂತರ ಅವರ ಮೇಲೆ ದಾಳಿ ಮಾಡಲು ಸೂಚಿಸಿದರು. ಹಾಗೆ 150 ಸಹಾಬಿಯರನ್ನು ಒಳಗೊಂಡ ಒಂದು ಸೇನೆಯನ್ನು ಆ ಗೋತ್ರಗಳನ್ನು ದಮನಿಸಲು ಹಝ್ರತ್ ಪೈಗಂಬರ್(ಸ) ಕಳುಹಿಸಿದರು. ತೈ ಗೋತ್ರದ ಆ ವ್ಯಕ್ತಿ ಅಂದರೆ ವಲೀದ್ ಬಿನ್ ಝುಹೈರ್ ಮಾರ್ಗದರ್ಶಕನನ್ನಾಗಿ ಅವರೊಂದಿಗೆ ಇದ್ದನು.( ಸೀರತ್ ಇನ್‌ಸೈಕ್ಲೋಪೀಡಿಯಾ, ಸಂಪುಟ–6, ಪುಟ–422–425, ದಾರುಸ್ಸಲಾಮ್ ರಿಯಾಧ್, 1434 ಹಿಜರಿ) (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–6, ಪುಟ–34, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಸರಿಯಾದಲ್ಲಿ ಭಾಗವಹಿಸಿದ ಕೆಲವು ಸಹಾಬೀಯರ ಹೆಸರುಗಳು ಇಲ್ಲಿವೆ.

ಅಬು ಸಬ್ರಾಹ್ ಬಿನ್ ಅಬಿ ರಹಮ್, ಅಬ್ದುಲ್ಲಾ ಬಿನ್ ಸುಹೈಲ್ ಬಿನ್ ಅಮ್ರ್, ಅಬ್ದುಲ್ಲಾ ಬಿನ್ ಮಖ್ರಮಾಹ್ ಅಮ್ರಿ, ಮುಅತ್ತಿಬ್ ಬಿನ್ ಫಝಲ್, ಅರ್ಕಮ್ ಬಿನ್ ಅಬಿ ಅರ್ಕಮ್, ಅಬು ಉಬೈದಾ ಬಿನ್ ಜರ್ರಾಹ್, ಸುಹೇಲ್ ಬಿನ್ ಬೈಝಾ, ಉಸೈದ್ ಬಿನ್ ಹುಝೈರ್ ಅನ್ಸಾರಿ, ಅಬ್ಬಾದ್ ಬಿನ್ ಬಿಶ್ರ್ ಅನ್ಸಾರಿ, ಅಬು ನಾಯಿಲಾ ಅನ್ಸಾರಿ, ಅಬೂಅಬ್ಸ್, ಕತಾದಾ ಬಿನ್ ನುಮಾನ್, ನಝ್ರ್ ಇಬ್ನೆ ಹಾರಿಸ್, ಅಬು ಕತಾದಾ ಅನ್ಸಾರಿ, ಅಬು ಅಯ್ಯಾಶ್ ಝುರ್ಕಿ, ಅಬ್ದುಲ್ಲಾ ಬಿನ್ ಝೈದ್ ಅನ್ಸಾರಿ, ಖುಬೈಬ್ ಬಿನ್ ಯಾಸಫ್, ಸಾದ್ ಬಿನ್ ಅಬಿ ವಕ್ಕಾಸ್, ಅಬು ಹುದೈಫಾ ಬಿನ್ ಉತ್ಬಾ, ಸಲೀಂ ಮೌಲಾ ಅಬು ಹುದೈಫಾ.

(ಕಿತಾಬುಲ್ ಮಘಾಜಿ ಲಿಲ್–ವಕ್ದಿ, ಸಂಪುಟ–1, ಪುಟ–341, ಆಲಂ ಅಲ್–ಕಿತಾಬ್, ಬೈರುತ್, 1984) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ–424, ದಾರುಸ್ಸಲಾಮ್, ರಿಯಾದ್, 1434 ಹಿಜರಿ)

ಸಹಾಬೀಯರ ಈ ಸೇನೆ ತಮ್ಮ ಕಾರ್ಯಾಚರಣೆಯನ್ನು ರಹಸ್ಯವಾಗಿರಿಸಿಕೊಂಡು ಸಾಧ್ಯವಾದಷ್ಟು ಬೇಗ ಶತ್ರುಗಳನ್ನು ತಲುಪುವ ಸಲುವಾಗಿ ಸಾಮಾನ್ಯ ರಸ್ತೆಯಿಂದ ಸರಿದು ಬೇರೆ ಮಾರ್ಗದಿಂದ ಹೆಚ್ಚಿನ ವೇಗದಲ್ಲಿ ಶತ್ರುಗಳ ಬಳಿ ಲುಪಿದರು. ಅವರು ಹಗಲು ರಾತ್ರಿ ನಿರಂತರವಾಗಿ ಪ್ರಯಾಣಿಸಿದರು. ಒಂದು ವರದಿಯ ಪ್ರಕಾರ, ಅವರು ಹಗಲಿನ ಒಂದು ಭಾಗದಲ್ಲಿ ಅವರು ಬಚ್ಚಿಕೊಳ್ಳುತ್ತಿದ್ದರು ಮತ್ತು ರಾತ್ರಿಯ ಸಮಯದಲ್ಲಿ ಪ್ರಯಾಣಿಸುತ್ತಿದ್ದರು. ಹೀಗೆ ನಾಲ್ಕು ದಿನಗಳ ಯಾತ್ರೆಗಳ ನಂತರ ಖತನ್ ಪರ್ವತದ ಸಮೀಪವಿರುವ ಬನೂ ಅಸದ್ ಬಿನ್ ಖುಝೈಮದ ಕಾರಂಜಿಯ ಬಳಿಗೆ ತಲುಪಿತು. ಖತನ್‌ಗೆ ಸಂಬಂಧಿಸಿದಂತೆ, ಇದು ಫೈದ್ ಬಳಿಯ ಪರ್ವತದ ಹೆಸರಾಗಿದೆ ಎಂದು ಬರೆಯಲಾಗಿದೆ ಮತ್ತು ಬನೂ ಅಸದ್ ಬಿನ್ ಖುಝುಮಾ ಅವರು ಕಾರಂಜಿಯನ್ನು ಹೊಂದಿದ್ದ ಕೂಫಾಗೆ ಹೋಗುವ ಮಾರ್ಗದಲ್ಲಿರುವ ಸ್ಥಳದ ಹೆಸರು ಫೈದ್ ಆಗಿದೆ. ಅಲ್ಲಿ ತಲುಪುತ್ತಲೇ ಅವರ ಜಾನುವಾರುಗಳನ್ನು ವಶಪಡಿಸಿಕೊಂಡಿತು ಮತ್ತು ಅವರ ಮೂವರು ಕುರುಬರನ್ನು ಹಿಡಿಗೂಡಿತು. ಇತರರು ಪರಾರಿಯಾಗುವುದರಲ್ಲಿ ಯಶಸ್ವಿಯಾದರು. ಪರಾರಿಯಾದವರು ಈ ದಾಳಿಯ ಬಗ್ಗೆ ಬನೂ ಅಸದ್ ಗೋತ್ರಕ್ಕೆ ಅತಿಶಯೋಕ್ತಿಯಿಂದ ಹೇಳಿಕೊಟ್ಟರು ಮತ್ತು ಮುಸ್ಲಿಮರ ಸಂಖ್ಯೆಯನ್ನು ಬಹಳ ಹೆಚ್ಚಿಸಿ ಹೇಳಿಕೊಂಡರು. ಇದು ಅವರಲ್ಲಿ ಭಯವನ್ನು ಉಂಟುಮಾಡಿತು. ಇದರಿಂದ ಗಾಬರಿಗೊಂಡ ಬನೂ ಅಸದ್ ಮುಸಲ್ಮಾನರ ಹಠಾತ್ ಆಗಮನದಿಂದ ಭಯಭೀತರಾಗಿ ಇತ್ತಿಂದತ್ತ ಓಡಿಹೋಗುವಷ್ಟು ಭಯಭೀತರಾದರು. ಹಝ್ರತ್ ಅಬೂಸಲಮಾ(ರ) ಅವರು ಬನೂ ಅಸದ್ ಅವರ ಶಿಬಿರವನ್ನು ತಲುಪಿದಾಗ ಶತ್ರುಗಳು ಓಡಿಹೋಗಿರುವುದನ್ನು ಕಂಡಾಗ, ಅವರು ತಮ್ಮ ಸಹಚರರನ್ನು ಅವರನ್ನು ಹುಡುಕಲು ಕಳುಹಿಸಿದರು. ಹಝ್ರತ್ ಅಬೂಸಲಮಾ(ರ) ಅವರನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದರು. ಒಂದು ಭಾಗವು ಅವರೊಂದಿಗೆ ಉಳಿಯಿತು. ಉಳಿದ ಇಬ್ಬರನ್ನು ಎರಡು ಬೇರೆ ಬೇರೆ ದಿಕ್ಕುಗಳಲ್ಲಿ ಕಳುಹಿಸಿದರು ಮತ್ತು ಶತ್ರುವನ್ನು ಹಿಂಬಾಲಿಸುವಾಗ ಹೆಚ್ಚು ದೂರ ಹೋಗದಂತೆ ಮತ್ತು ಶತ್ರುಗಳೊಂದಿಗೆ ಯಾವುದೇ ಮುಖಾಮುಖಿಯಾಗದಿದ್ದರೆ ಹಿಂತಿರುಗಿ ಮತ್ತು ರಾತ್ರಿಯಲ್ಲಿ ಅವರೊಂದಿಗೆ ಇರುವಂತೆ ಸೂಚಿಸಿದರು ಅದೇ ರೀತಿ ಜೊತೆಗೇ ಒಟ್ಟಿಗೆ ಇರಲು ಸೂಚಿಸಿದ್ದರು ಆದರೆ ಶತ್ರುಗಳು ಎಷ್ಟು ಬೇಗನೆ ಓಡಿಹೋದರು ಎಂದರೆ ಮುಸ್ಲಿಮರಿಗೆ ಅವರನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಹಝ್ರತ್ ಅಬೂ ಸಲಮಾ(ರ) ಅವರು ಎಲ್ಲಾ ಯುದ್ಧ ಸಂಪತ್ತಿನೊಂದಿಗೆ ಮದೀನಾಗೆ ಹಿಂದಿರುಗಿದರು. ಮಾರ್ಗದರ್ಶಕನಾಗಿ ಜೊತೆಗಿದ್ದ ವ್ಯಕ್ತಿ ಕೂಡಲೇ ಹಿಂದಿರುಗಿದ. ಒಂದು ರಾತ್ರಿ ಪ್ರಯಾಣ ಮಾಡಿದ ನಂತರ ಹಝ್ರತ್ ಅಬೂ ಸಲಮಾ(ರ) ಅವರು ಯುದ್ಧ ಸಂಪತ್ತನ್ನು ವಿತರಿಸಿದರು. ಅವರು ಹಝ್ರತ್ ಪೈಗಂಬರ್(ಸ) ಅವರಿಗಾಗಿ ಖುಮ್ಸ್ ಭಾಗವನ್ನು ಪ್ರತ್ಯೇಕಿಸಿದರು. ಮಾರ್ಗದರ್ಶಕನಿಗೆ ಅವನ ಸಂತೋಷಕ್ಕೆ ಅನುಗುಣವಾಗಿ ಸಂಪತ್ತನ್ನು ನೀಡಿದರು ಮತ್ತು ಉಳಿದ ಯುದ್ಧ ಸಂಪತ್ತನ್ನು ಸಹಚರರಿಗೆ ಹಂಚಿದನು. ಪ್ರತಿಯೊಬ್ಬ ಸಹಾಬಿಯು ಏಳು ಒಂಟೆಗಳು ಮತ್ತು ಹಲವಾರು ಆಡುಗಳನ್ನು ಪಡೆದರು ಮತ್ತು ಹೀಗೆ ಉಳಿದ ಪ್ರಯಾಣವನ್ನು ಪೂರ್ಣಗೊಳಿಸಿದರು, ಈ ಜನರು ಸುಮಾರು ಹತ್ತು ದಿನಗಳ ನಂತರ ಸಂತೋಷದಿಂದ ಮದೀನಾವನ್ನು ತಲುಪಿದರು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ–6, ಪುಟ–34, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ 425–428, ದಾರುಸ್ಸಲಾಮ್ ರಿಯಾದ್, 1434 ಹಿಜರಿ) (ಸೀರತ್ ಖಾತಮುನ್ನಬೀಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ ಎ, ಪುಟ 511–512) (ಅಟ್ಲಾಸ್ ಸೀರತುನ್ನಬೀ(ಸ), ಪುಟ–253, ದಾರುಸ್ಸಲಾಮ್ ರಿಯಾದ್ 1424 ಹಿಜರಿ)

ನಾನು ಹೇಳಿರುವುದು ಮತ್ತು ನಾನು ಅದರಲ್ಲಿ ಉಲ್ಲೇಖಿಸಿರುವುದು ವಿವಿಧ ಇತಿಹಾಸಗಳಿಂದ ಪಡೆದದ್ದು, ಸೀರತ್ ಖಾತಮುನ್ನಬೀಯೀನ್(ಸ) ನ ಸ್ವಲ್ಪ ಭಾಗವೂ ಇದರಲ್ಲಿ ಸೇರಿದೆ. ಆದಾಗ್ಯೂ, ಹಝ್ರತ್ ಅಬೂಸಲ್ಮಾ(ರ)ರ ನಿಧನದ ಬಗ್ಗೆ ಹೀಗೆ ಬರೆಯಲಾಗಿದೆ: ಅವರು ಮದೀನಕ್ಕೆ ಮರಳಿ ಬಂದ ನಂತರ ಉಹುದ್ ಯುದ್ಧದಲ್ಲಿ ಅವರಿಗೆ ಉಂಟಾದ ಗಾಯ ಪುನಃ ಉಲ್ಬಣಗೊಂಡು ಅವರು ರೋಗಿಯಾದರು ಮತ್ತು ಅದೇ ವರ್ಷ ಜಮಾದಿಯುಲ್ ಆಖಿರ್ ಮೂರರಂದು ನಿಧನಗೊಂಡರು.

(ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–182, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಬನೂ ಅಸದಿನ ಸರದಾರ ತುಲೈಹ ಬಿನ್ ಖುವೈಲಿದ್‌ರ ಪ್ರಸ್ತಾಪಿಸಲಾಗಿದೆ. ಆತನು ಅತ್ಯಂತ ಧೈರ್ಯಶಾಲಿ ವ್ಯಕ್ತಿಯಾಗಿದ್ದರು ಮತ್ತು ಅರೇಬಿಯಾ ದೇಶದಲ್ಲಿ ಒಂದು ಸಾವಿರ ಕುದುರೆ ಸವಾರರಿಗೆ ಸಮಾನವೆಂದು ಪರಿಗಣಿಸಲ್ಪಟ್ಟಿದ್ದರು ಮತ್ತು ಅವರು ಬಹಳ ವಾಗ್ಮಿ ಎಂದು ಪ್ರಸಿದ್ಧರಾಗಿದ್ದರು. 9 ಹಿಜ್ರಿಯಲ್ಲಿ, ಅವರು ಹಝ್ರತ್ ಪೈಗಂಬರ್(ಸ)ರ ಸೇವೆಯಲ್ಲಿ ಬನೂಅಸದ್‌ನ ನಿಯೋಗದೊಂದಿಗೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು ಅನಂತರ ಪುನಃ ಮುರ್ತದ್ ಆದರು. ಮಾತ್ರವಲ್ಲ ಹಝ್ರತ್ ಪೈಗಂಬರ್(ಸ)ರ ಜೀವನದಲ್ಲಿ ಸುಳ್ಳು ಪ್ರವಾದಿತ್ವ ವಾದವನ್ನು ಮಾಡಿಕೊಂಡು ಪಿತೂರಿ ಮತ್ತು ಕಲಹಕ್ಕೆ ಕಾರಣಕರ್ತರಾದರು. ಆದರೆ ಪರಾಜಿತರಾಗಿ ಅರೇಬಿಯದಿಂದ ಓಡಿ ಹೋದರು. ಅನಂತರ ಸ್ವಲ್ಪ ಕಾಲದ ನಂತರ ಮದೀನಾಗೆ ಬಂದು ಹಝ್ರತ್ ಉಮರ್(ರ) ಅವರ ಬೈಅತ್ ಮಾಡಿದನು

ಮತ್ತು ಕೊನೆಯವರೆಗೂ ಇಸ್ಲಾಂ ಧರ್ಮದ ಕಡೆಗೆ ದೃಢತೆಯನ್ನು ತೋರಿಸಿದರು. ಪಶ್ಚಾತ್ತಾಪಪಟ್ಟು ಖಾದಸೀಯಾ ಯುದ್ಧ ಹಾಗೂ ಇಸ್ಲಾಮಿನ ಯುದ್ಧಗಳಲ್ಲಿ ಭಾಗವಹಿಸಿ ತನ್ನ ಶೌರ್ಯದ ಕೌಶಲವನ್ನು ತೋರಿಸಿ ಹಿಜರೀ 21ರಲ್ಲಿ ಒಂದು ಯುದ್ಧದಲ್ಲಿ ಶಹೀದಿನ ಪದವಿಯನ್ನು ಪಡೆದರು. (ಎನ್ಸೈಕ್ಲೋಪೀಡಿಯಾ ಆಫ್ ಬಯೋಗ್ರಫಿ, ಸಂಪುಟ–6, ಪುಟ 430–431, ದಾರುಸ್ಸಲಾವಮ್ ರಿಯಾದ್, 1434 ಹಿಜರಿ) (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ, ಪುಟ 511–512)

ಸರ್ವಶಕ್ತನಾದ ಅಲ್ಲಾಹನು ಆತನ ಅಂತ್ಯವನ್ನು ಉತ್ತಮಗೊಳಿಸಲು ಬಯಸಿದನು, ಆದ್ದರಿಂದ ಅಂತಿಮವಾಗಿ ಅವನು ಇಸ್ಲಾಮ್ ಧರ್ಮವನ್ನು ಸ್ವೀಕರಿಸುವ ಸೌಭಾಗ್ಯ ಪಡೆದುಕೊಂಡನು. ನಂತರ ಅನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಉನೈಸ್(ರ)ರ ಕಾರ್ಯಾಚರಣೆಯ ಪ್ರಸ್ತಾಪವಿದೆ. ಹಝ್ರತ್ ಅಬ್ದುಲ್ಲಾಹ್(ರ) ಬೈಅತ್ ಉಖ್ಬ ಸಾನಿಯದಲ್ಲಿ ಹಾಗೂ ಬದ್ರ್, ಉಹುದ್ ಮತ್ತು ಇತರ ಯುದ್ಧಗಳಲ್ಲಿ ಭಾಗವಹಿಸಿದ್ದರು. (ಅಸದುಲ್ ಗ್ಹಾಬ, ಸಂಪುಟ–3, ಪುಟ–178, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2008) (ಅಸ್ಸೀರತುನ್ನಬವೀಯಾ ಲಿಇಬ್ನೆ ಹಿಶಾಮ್, ಪುಟ–412, 419, ದಾರುಲ್ ಮಾರಿಫ ಬೈರುತ್)

ಹಝ್ರತ್ ಅಬ್ದುಲ್ಲಾಹ್ ಬಿನ್ ಉನೈಸ್(ರ) ಅವರು ಸಿರಿಯಾದಲ್ಲಿ ಹಿಜರೀ 54ರಲ್ಲಿ ಅಥವಾ ಕೆಲವು ವರದಿಗಳ ಪ್ರಕಾರ ಹಿಜರೀ 74ರಲ್ಲಿ ನಿಧನಗೊಂಡರು. (ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–4, ಪುಟ–14, ದಾರುಲ್ ಕುತುಬ್ ಇಲ್ಮಿಯಾ ಬೈರುತ್) (ಅಸದುಲ್ಗ್ಹಾಬ, ಸಂಪುಟ–3, ಪುಟ–178, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2008)

ಉಹುದ್ ಯುದ್ಧದ ಘಟನೆಗಳು ಮದೀನಾದ ಸುತ್ತಮುತ್ತಲಿನ ಗೋತ್ರದ ಜನರಿಗೆ ತಿಳಿದಾಗ, ಮುಸ್ಲಿಮರನ್ನು ದುರ್ಬಲರೆಂದು ಪರಿಗಣಿಸಿ ಅವರ ಮೇಲೆ ದಾಳಿ ಮಾಡಲು ಯೋಜಿಸಿದವರಲ್ಲಿ ಬನೂ ಲಹ್ಯಾನ್ ಗೋತ್ರದ ಮುಖ್ಯಸ್ಥ ಖಾಲಿದ್ ಬಿನ್ ಸುಫ್ಯಾನ್ ಹುಧಾಲಿ ಲಹ್ಯಾನ್ ಕೂಡ ಇದ್ದನು. ಕೆಲವು ವರದಿಗಳಲ್ಲಿ, ಅವನ ಹೆಸರು ಸುಫ್ಯಾನ್ ಬಿನ್ ಖಾಲಿದ್ ಎಂದು ಪ್ರಸ್ತಾಪಿಸಲಾಗಿದೆ. ಆದಾಗ್ಯೂ, ಆತನು ಉಹದ್‌ನಲ್ಲಿ ಮುಸ್ಲಿಮರು ಈಗಷ್ಟೆ ನಷ್ಟವನ್ನು ಅನುಭವಿಸಿದ್ದಾರೆ ಆದ್ದರಿಂದ ಅವರ ದೌರ್ಬಲ್ಯದ ಲಾಭವನ್ನು ಪಡೆದುಕೊಂಡು ಅವರ (ಮುಸ್ಲಿಮರ) ಮೇಲೆ ದಾಳಿ ಮಾಡಿ ಮದೀನಾವನ್ನು ಲೂಟಿ ಮಾಡಿ ಅವರ ಮೇಲೆ ತನ್ನ ದರ್ಪವನ್ನು ಸ್ಥಾಪಿನಬಹುದು ಎಂದು ಯೋಚಿಸಿದ್ದನು. ಈ ವ್ಯಕ್ತಿಯ ಮನಸ್ಸಿನಲ್ಲಿ ಇಸ್ಲಾಮಿನ ವಿರುದ್ಧ ಕಠೋರವಾದ ದುರಹಂಕಾರ ತುಂಬಿತ್ತು. ಇತನು ನಖ್ಲಾ ಅಥವಾ ಅರಫಾತ್‌ನ ಬಳಿಯ ಉರ್ನಾ ಎಂಬ ಕಣಿವೆಯಲ್ಲಿ ಸೈನ್ಯವನ್ನು ಸಿದ್ಧಪಡಿಸುತ್ತಿದ್ದನು. ಅವನು ತನ್ನ ಸಮುದಾಯದ ಯೋಧರನ್ನು ಮತ್ತು ತನ್ನ ಸುತ್ತಮುತ್ತಲಿನ ಜನರನ್ನು ಮುಸ್ಲಿಮರ ವಿರುದ್ಧ ಒಗ್ಗೂಡಿಸಲು ಪ್ರಚಾರ ನಡೆಸಿದ್ದನು ಆದ್ದರಿಂದ ವಿವಿಧ ಗೋತ್ರಗಳಿಗೆ ಸೇರಿದ ಅನೇಕ ಜನರು ಅವನ ಸುತ್ತಲೂ ಜಮಾಯಿಸಿದ್ದರು. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ–433, ದಾರುಸ್ಸಲಾಮ್ ರಿಯಾದ್, 1434 ಹಿಜರಿ)

ಸುಫ್ಯಾನ್ ಬಿನ್ ಖಾಲಿದ್ ಮದೀನದ ಮೇಲೆ ದಾಳಿ ಮಾಡಲು ಸೈನ್ಯವನ್ನು ಒಟ್ಟುಗೂಡಿಸಿದ್ದಾನೆ ಎಂದು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿದಾಗ, ಅವರು ಸೈನ್ಯವನ್ನು ಸಿದ್ಧಪಡಿಸುವ ಬದಲು ಮತ್ತು ಸುಫ್ಯಾನ್ ವಿರುದ್ಧ ಹೋರಾಡಲು ಕಳುಹಿಸುವ ಒಂದು ಅನನ್ಯ ಮತ್ತು ಬುದ್ಧಿವಂತಿಕೆಯ ನಿರ್ಧಾರವನ್ನು ಮಾಡಿದರು. ಮತ್ತು ಎರಡೂ ಕಡೆಗಳಲ್ಲಿ ರಕ್ತಪಾತ ಆಗಬಹುದು ಎಂದು ಆ ಬಂಡಾಯ ಸೈನ್ಯವನ್ನು ರಚಿಸಿದ ಸಂಸ್ಥಾಪಕನನ್ನು ವಧಿಸುವುದು ಸೂಕ್ತವೆಂದು ಪರಿಗಣಿಸಿ ಯುಕ್ತಿಯ ಕಾರ್ಯವನ್ನು ಕೈಗೊಂಡರು. ಆದ್ದರಿಂದ ಹಝ್ರತ್ ಪೈಗಂಬರ್(ಸ)ರವರು ಈ ಅಪಾಯಕಾರಿ ಆದರೆ ಪ್ರಮುಖ ಕಾರ್ಯಾಚರಣೆಗಾಗಿ ತಮ್ಮ ಓರ್ವ ಧೈರ್ಯಶಾಲಿ ಸಹಚರರಲ್ಲಿ ಒಬ್ಬರಾದ ಹಝ್ರತ್ ಅಬ್ದುಲ್ಲಾ ಬಿನ್ ಉನೈಸ್(ರ) ಅವರನ್ನು ಆಯ್ಕೆ ಮಾಡಿದರು. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–6, ಪುಟ 433–434, ದಾರುಸ್ಸಲಾಮ್ ರಿಯಾದ್ 1434 ಹಿಜರಿ)

ಹಝ್ರತ್ ಪೈಗಂಬರ್(ಸ) ರವರು ಹಝ್ರತ್ ಅಬ್ದುಲ್ಲಾ ಬಿನ್ ಉನೈಸ್(ರ) ಅವರನ್ನು ಕರೆದು ಸುಫ್ಯಾನ್ ಬಿನ್ ಖಾಲಿದ್‌ನ ಯೋಜನೆಯ ವಿವರಗಳನ್ನು ತಿಳಿಸಿ ಆತನನ್ನು ಸದ್ದಿಲ್ಲದೆ ಹೋಗಿ ವಧಿಸಲು ಆಜ್ಞಾಪಿಸಿದರು.

(ದಾಎರಾ ಮುಆರಿಫ್, ಸೀರತ್ ಮುಹಮ್ಮದ್ ರಸೂಲುಲ್ಲಾಹ್(ಸ), ಸಂಫುಟ–7, ಪುಟ–135, ಬಿಜ್ಮ್ ಇಕ್ಬಾಲ್, ಲಾಹೋರ್ 2022)

ಅಬ್ದುಲ್ಲಾ ರವರು ಹಝ್ರತ್ ಪೈಗಂಬರ್(ಸ) ಅವರನ್ನು ಕೇಳಿದರು: ಯಾ ರಸೂಲಲ್ಲಾಹ್(ಸ)! ಆತನು ನೋಡಲು ಹೇಗಿದ್ದಾನೆ ಎಂದು ತಿಳಿಸಿ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, "ನೀವು ಅವನನ್ನು ನೋಡಿದಾಗ, ನೀವು ಆಶ್ಚರ್ಯಚಕಿತರಾಗುತ್ತೀರಿ ಮತ್ತು ನೀವು ಅವನನ್ನು ನೋಡಿದ ತಕ್ಷಣ ನಿಮಗೆ ಸೈತಾನನನ್ನು ನೆನಪಿಸಿಕೊಳ್ಳುತ್ತೀರಿ. ಅದಕ್ಕೆ ಅಬ್ದುಲ್ಲಾಹ್(ರ) ಹೇಳಿದರು: ಯಾ ರಸೂಲಲ್ಲಾಹ್(ಸ)!! ನಾನು ಎಂದಿಗೂ ಯಾರನ್ನು ನೋಡಿ ಹೆದರಲಿಲ್ಲ. ಅದಕ್ಕೆ ರಸೂಲುಲ್ಲಾಹ್(ಸ) ನುಡಿದರು: ಹೌದು ಆದರೆ ನೀವು ಆತನನ್ನು ನೋಡಿದರೆ ನಿಮ್ಮ ರೋಮು ನಿಲ್ಲುತ್ತವೆ. ಹಾಗಾಗಿ 5 ಮುಹರ್ರಮ್ 4 ಹಿಜರಿಯಲ್ಲಿ ಇವರು ಒಬ್ಬಂಟಿಯಾಗಿ ಈ ಕಾರ್ಯಾಚರಣೆಗೆ ಹೊರಟರು. ಅಬ್ದುಲ್ಲಾ(ರ) ಹೇಳಿದರು: ನಾನು ಅರಾಫತ್ ಬಳಿಯ ಕಣಿವೆಯಾದ ಉರ್ನಾ ಸ್ಥಳಕ್ಕೆ ತಲುಪಿದಾಗ, ಕೋಲಿನ ಬೆಂಬಲದೊಂದಿಗೆ ಸುಫ್ಯಾನ್ ನಡೆಯುವುದನ್ನು ನಾನು ನೋಡಿದೆ ಮತ್ತು ಅವನ ಹಿಂದೆ ವಿವಿಧ ಗೋತ್ರಗಳ ಜನರು ಸೇರಿಕೊಂಡರು. ಈತನು ವಯಸ್ಸಾದ ಕಾರಣದಿಂದ ಕೋಲು ಹಿಡಿದಿರಲಿಲ್ಲ, ಬದಲಿಗೆ ಆ ಕಾಲದಲ್ಲಿ ಕೈಯಲ್ಲಿ ಕೋಲು ಇಟ್ಟುಕೊಳ್ಳುವುದು ವಾಡಿಕೆಯಾಗಿತ್ತು. ಆದಾಗ್ಯೂ, ಅಬ್ದುಲ್ಲಾ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ.ಅ) ಆತನ ಬಗ್ಗೆ ನನಗೆ ತಿಳಿಸಿದ್ದಕ್ಕಾಗಿ, ನಾನು ಆತನನ್ನು ತಕ್ಷಣ ಗುರುತಿಸಿಕೊಂಡೆ. ಏಕೆಂದರೆ ನಾನು ಆತನನ್ನು ನೋಡಿದ ತಕ್ಷಣ ನನಗೆ ಭಯವುಂಟಾಯಿತು ಮತ್ತು ನಾನು ಯಾರಿಗೂ ಹೆದರುತ್ತಿರಲಿಲ್ಲ. ಹೀಗೆ ನಾನು ನನ್ನ ಹೃದಯದಲ್ಲಿ ಹೇಳಿದೆ, ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಸತ್ಯವನ್ನು ಹೇಳಿದ್ದಾರೆ. ಆಗ ಅಸರ್ ನಮಾಝಿನ ಸಮಯವಾದ್ದರಿಂದ ಈಗ ಅವನನ್ನು ಭೇಟಿಯಾದರೆ ನನ್ನ ಅಸರ್ ನಮಾಝ್ ಬಿಡಲಾರದೇನೋ ಎಂಬ ಭಯದಿಂದ ನಾನು ಅವನ ಕಡೆಗೆ ನಡೆಯುತ್ತಲೇ ನಮಾಝ್ ನಿರ್ವಹಿಸಿದೆ ಮತ್ತು ಅದೇ ಸಮಯದಲ್ಲಿ ನನ್ನ ತಲೆಯಿಂದ ಸನ್ನೆ ಮಾಡುತ್ತಿದ್ದೆ ಅಂದರೆ ಸನ್ನೆಯ ಮೂಲಕ ನಮಾಝ್ ನಿರ್ವಹಿಸಿದೆ. ನಾನು ಅವನ ಬಳಿಗೆ ತಲುಪಿದಾಗ, ಅವನು ನೀವು ಯಾರು? ಎಂದು ನನಗೆ ಕೇಳಿದನು ಅದಕ್ಕೆ ನಾನು ಬನೂ ಖುಝಾದಿಂದ ಬಂದವನು ಎಂದು ಹೇಳಿದೆ. ಮುಹಮ್ಮದ್(ಸ) ಅವರೊಂದಿಗೆ ಹೋರಾಡಲು ನೀವು ಸೈನ್ಯವನ್ನು ಸಂಗ್ರಹಿಸುತ್ತಿದ್ದೀರಿ ಎಂದು ನಾನು ಕೇಳಿದೆ. ಅದಕ್ಕಾಗಿಯೇ ನಾನು ನಿಮ್ಮೊಂದಿಗೆ ಸೇರಲು ಬಂದಿದ್ದೇನೆ ಎಂದು ಹೇಳಿದೆ: ಅದಕ್ಕೆ ಅವನು ಹೇಳಿದನು: ನಿಜವಾಗಿಯೂ, ನಾನು ಮುಹಮ್ಮದ್(ಸ)ರ ವಿರುದ್ಧ ಹೋರಾಡಲು ಸೈನ್ಯವನ್ನು ಸಂಗ್ರಹಿಸುತ್ತಿದ್ದೇನೆ. ಹೀಗೆ ನಾನು ಅವನೊಂದಿಗೆ ಕೆಲ ಕಾಲ ನಡೆದೆ. ನಂತರ ನಾನು ಅವನೊಂದಿಗೆ ಮಾತನಾಡಲು ಪ್ರಾರಂಭಿಸಿದೆ ಮತ್ತು ಅವನು ನನ್ನ ಮಾತುಗಳಲ್ಲಿ ತುಂಬಾ ಆಸಕ್ತಿ ವಹಿಸಿದನು. ಸುಫ್ಯಾನ್ ಬಿನ್ ಖಾಲಿದ್ ಹೇಳಿದನು: ವಾಸ್ತವವೇನೆಂದರೆ ಮುಹಮ್ಮದ್(ಸ)ರು ನನ್ನಂತಹ ಯಾರನ್ನೂ ಇನ್ನೂ ಕಂಡುಕೊಂಡಿಲ್ಲ. ಇದುವರೆಗೆ ಅವರಿಗೆ ನನ್ನಂತಹ ಯುದ್ಧದಲ್ಲಿ ಪರಿಣಿತ ಹೊಂದಿರುವ ವ್ಯಕ್ತಿಯನ್ನು ಎದುರಾಗಲಿಲ್ಲ. ಅಂತಿಮವಾಗಿ, ಆತನು ತನ್ನ ಡೇರೆ ತಲುಪಿದಾಗ ಅವನ ಸಹಚರರು ಅಲ್ಲಿ ಇಲ್ಲಿ ತೆರಳಿದರ ಆಗ, ಆತನು ನನಗೆ ಹೇಳಿದನು, ಓ ಖುಝಾಅ ಸಹೋದರನೇ! ಇಲ್ಲಿ ಬನ್ನಿ. ನಾನು ಆತನ ಹತ್ತಿರ ಬಂದಾಗ ಆತನು ನನ್ನನ್ನು ಕುಳಿತುಕೊಳ್ಳಲು ಹೇಳಿದನು. ನಾನು ಆತನ ಬಳಿ ಕುಳಿತುಕೊಂಡೆ. ಆ ಸಂದರ್ಭದಲ್ಲಿ ಎಲ್ಲಾ ಕಡೆಗಳಲ್ಲಿ ರಾತ್ರಿಯ ಕತ್ತಲೆ ಆವರಿಸಿತ್ತು ಜನರು ನಿದ್ರಿಸುವವರೆಗೂ ನಾನು ಅವನ ಬಳಿ ಕುಳಿತುಕೊಂಡೆ, ನಂತರ ನಾನು ಇದ್ದಕ್ಕಿದ್ದಂತೆ ಎದ್ದು ಅವನನ್ನು ವಧಿಸಿ ಅವನ ತಲೆಯನ್ನು ತೆಗೆದುಕೊಂಡು ಅಲ್ಲಿಂದ ಹೊರಟು ಹತ್ತಿರದ ಪರ್ವತ ಗುಹೆಯಲ್ಲಿ ಅಡಗಿಕೊಂಡೆ. ಕೆಲವರು ಈ ಗುಹೆಗೆ ಹುಡುಕಿಕೊಂಡು ಬಂದರು ಆದರೆ ಅವರಿಗೆ ಏನೂ ಸಿಗಲಿಲ್ಲ. ಹೀಗಾಗಿ ಅವರು ನಿರಾಸೆಯಿಂದ ಹಿಂತಿರುಗಿದರು. ತದನಂತರ ನಾನು ಗುಹೆಯನ್ನು ಬಿಟ್ಟು ಹೊರಟೆ. ನಾನು ರಾತ್ರಿಯಲ್ಲಿ ಪ್ರಯಾಣಿಸುತ್ತಿದ್ದೆ ಮತ್ತು ಹಗಲಿನಲ್ಲಿ ಎಲ್ಲೋ ಅಡಗಿಕೊಳ್ಳುತ್ತಿದ್ದೆ. ಅಂತಿಮವಾಗಿ ನಾನು ಮದೀನಾಗೆ ತಲುಪಿದಾಗ, ನನ್ನನ್ನು ನೋಡಿದ ನಂತರ, ಹಝ್ರತ್ ಪೈಗಂಬರ್(ಸ) ತಕ್ಷಣ ನುಡಿದರು: **ಅಫ್ಲಹಲ್ ವಜ್‌ಹು,** ಅಂದರೆ, ಈ ಮುಖವು ಯಶಸ್ವಿಯಾಗಿದೆ. ಈಗ ನೋಡಿ, ಅವರು ಇದನ್ನು ಬಹಳ ನಮ್ರತೆಯಿಂದ ಹೇಳಿದರು ಮತ್ತು ಮಹಾನ್ ಬುದ್ಧಿವಂತಿಕೆಯಿಂದ ಅವರು ಹಝ್ರತ್ ಪೈಗಂಬರ್(ಸ) ಅವರನ್ನು ಹೇಳಿದರು ಮತ್ತು ಅವರು ತಕ್ಷಣವೇ ಈ ವಾಕ್ಯವನ್ನು ಹೇಳಿದರು: **ಅಫ್ಲಹ ವಜ್‌ಹುಕ ಯಾ ರಸೂಲಲ್ಲಾಹ್!!** ಯಾ ರಸೂಲಲ್ಲಾಹ್(ಸ)! ನಿಮ್ಮ ಮುಖವು ಯಶಸ್ವಿಯಾಗಿದೆ. ಅಂದರೆ ಈ ಎಲ್ಲಾ ಯಶಸ್ಸು ನಿಮ್ಮದು, ನಿಮ್ಮ ಪ್ರಾರ್ಥನೆಯ ಆಶೀರ್ವಾದವೇ ಕಾರಣ. ಅದರ ನಂತರ ಹಝ್ರತ್ ಅಬ್ದುಲ್ಲಾ(ರ) ಕಾರ್ಯಾಚರಣೆಯ ಸಂಪೂರ್ಣ ವಿವರಗಳನ್ನು ವಿವರಿಸಿದರು

ಮತ್ತು ಈ ಬಂಡಾಯ ನಾಯಕನ ತಲೆಯನ್ನು ಅವರ ಮುಂದೆ ಇರಿಸಿದರು. ಹಝ್ರತ್ ಅಬ್ದುಲ್ಲಾ ಬಿನ್ ಉನೈಸ್(ರ) ಅವರ ಆಗಮನದ ಮೊದಲು ಸುಫ್ಯಾನ್ ಬಿನ್ ಖಾಲಿದ್ ಅವನ ವಧೆಯ ಬಗ್ಗೆ ಹಝ್ರತ್ ಪೈಗಂಬರ್(ಸ)ರು ತಿಳಿಸಿದ್ದರು ಎಂಬ ವರದಿಯು ಇದೆ. ಹಝ್ರತ್ ಅಬ್ದುಲ್ಲಾಹ್(ರ) ಹೇಳುತ್ತಾರೆ: ಈ ಯಶಸ್ಸಿನ ಬಗ್ಗೆ ಹಝ್ರತ್ ಪೈಗಂಬರ್(ಸ)ರವರು ಸಂತೋಷಪಟ್ಟರು ಮತ್ತು ನನಗೆ ಒಂದು ಕೋಲನ್ನು ನೀಡುತ್ತಾ ಹೀಗೆ ಹೇಳಿದರು: ಇದು ನನ್ನ ಮತ್ತು ನಿಮ್ಮ ನಡುವೆ ಸ್ವರ್ಗದಲ್ಲಿ ಒಂದು ಚಿಹ್ನೆಯಾಗಲಿದೆ. ನೀವು ಅದರೊಂದಿಗೆ ಸ್ವರ್ಗದಲ್ಲಿ ಮಲಗುವಿರಿ. ಹಾಗಾಗಿ ನಂತರ ಈ ಕೋಲು ಯಾವಾಗಲೂ ಅಬ್ದುಲ್ಲಾ ಬಿನ್ ಉನೈಸ್(ರ) ಅವರ ಜೊತೆ ಇರುತ್ತಿತ್ತು. ಅವರ ಕೊನೆಯ ಘಳಿಗೆ ಬಂದಾಗಲೂ ಈ ಕೋಲನ್ನು ನನ್ನ ಹೆಣದ ಒಳಗೆ ನನ್ನ ದೇಹ ಮತ್ತು ಹೆಣದ ನಡುವೆ ಇರುವಂತೆ ಇಡಬೇಕು ಎಂದು ಹೇಳಿ ಮನೆಯವರಿಗೆ ಉಯಿಲು ಮಾಡಿದರು. ಹಾಗಾಗಿ ಕುಟುಂಬದ ಸದಸ್ಯರು ಈ ಉಯಿಲನ್ನು ಪಾಲಿಸಿದರು. ಅಬ್ದುಲ್ಲಾ ಬಿನ್ ಉನೈಸ್(ರ) ಅವರನ್ನು ಧುಲ್-ಮಿಖ್ಸಾರಾ ಎಂದೂ ಕರೆಯುತ್ತಾರೆ, ಅಂದರೆ ಕೋಲು ಹೊಂದಿರುವವರು.

(ಸೀರತುಲ್ ಹಲಬೀಯಾ, ಸಂಪುಟ-3, ಪುಟ 231-232, ದಾರುಲ್ ಕುತುಬ್ ಇಲ್ಮಿಯಾ ಬೈರುತ್) (ಶರ್ಹ್ ಅಲ್ಲಮಾ ಝುರ್ಕಾನಿ, ಸಂಪುಟ-2, ಪುಟ-474, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಹಝ್ರತ್ ಅಬ್ದುಲ್ಲಾ ಬಿನ್ ಉನೈಸ್(ರ) ಅವರು ಹದಿನೆಂಟು ದಿನಗಳ ಕಾಲ ಮದೀನಾದಿಂದ ಹೊರಗಿದ್ದರು ಮತ್ತು ಮುಹರ್ರಮ್‌ನ ಏಳು ದಿನಗಳು ಉಳಿದಿರುವಾಗ ಶನಿವಾರ ಹಿಂತಿರುಗಿದರು.

(ಅತ್ತಬಖಾತುಲ್ ಕುಬ್ರ, ಸಂಪುಟ-2, ಪುಟ-39, ದಾರುಲ್ ಕುತುಬ್ ಇಲ್ಮಿಯಾ ಬೈರುತ್, 2012)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹಿಜರೀ 4ರ ಮುಹರ್ರಮ್ ತಿಂಗಳ ವಿವರಣೆಯಲ್ಲಿ ಈ ಕಾರ್ಯಾಚರಣೆಯ ಬಗ್ಗೆ ಹೀಗೆ ವಿವರಿಸಿದ್ದಾರೆ: ಖುರೈಶಿಯರ ಕೆರಳಿಸುವಿಕೆ ಮತ್ತು ಉಹುದಿನಲ್ಲಿ ಮುಸ್ಲಿಮರ ತಾತ್ಕಾಲಿಕ ಪರಾಜಯ ಈಗ ಅತ್ಯಂತ ವೇಗವಾಗಿ ತನ್ನ ಅಪಾಯಕರ ಪರಿಣಾಮಗಳನ್ನು ಪ್ರಕಟಿಸುತ್ತಿತ್ತು. ಬನೂ ಅಸದ್ ಮದೀನದ ಮೇಲೆ ದಾಳಿ ನಡೆಸಲು ತಯಾರಿ ಮಾಡಿದ್ದ ಅದೇ ದಿನಗಳಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಹೀಗೆ ಮಾಹಿತಿ ಲಭಿಸಿತು: ಬನೂ ಲಹ್‌ಯಾನ್ ಗೋತ್ರದ ಜನರು ತಮ್ಮ ಸರದಾರ ಸುಫ್‌ಯಾನ್ ಬಿನ್ ಖಾಲಿದ್‌ನ ಪ್ರಚೋದನೆಯ ಪ್ರಕಾರ ಮಕ್ಕಾದ ಸಮೀಪದಲ್ಲಿ ಇದ್ದ ತಮ್ಮ ಸ್ವದೇಶವಾದ ಉರ್‌ನ ಎಂಬ ಸ್ಥಳದಲ್ಲಿ ದೊಡ್ಡದಾದೊಂದು ಸೇನೆಯನ್ನು ಒಟ್ಟುಗೂಡಿಸುತ್ತಿದ್ದಾರೆ ಮತ್ತು ಅವರ ಉದ್ದೇಶ ಮದೀನದ ಮೇಲೆ ದಾಳಿ ನಡೆಸುವುದಾಗಿದೆ. ಸ್ಥಿತಿಗತಿಗಳ ಬಗ್ಗೆ ಅತಿ ಸೂಕ್ಷ್ಮವಾದ ಅರಿವುಳ್ಳ ಮತ್ತು ಅರೇಬಿಯದ ವಿವಿಧ ಗೋತ್ರಗಳ ಸ್ಥಿತಿ ಹಾಗೂ ಅವುಗಳ ಸರದಾರರ ಶಕ್ತಿ ಮತ್ತು ಪ್ರಭಾವದ ಬಗ್ಗೆ ಚೆನ್ನಾಗಿ ಗೊತ್ತಿದ್ದ ಹಝ್ರತ್ ಪೈಗಂಬರ್(ಸ)ರಿಗೆ ಈ ಮಾಹಿತಿ ಲಭಿಸಿದ ಕೂಡಲೇ, ಈ ಎಲ್ಲ ಕಲಹ ಮತ್ತು ಪಿತೂರಿಯು ಬನೂ ಲಹ್‌ಯಾನಿನ ಸರದಾರ ಸುಫ್‌ಯಾನ್ ಬಿನ್ ಖಾಲಿದ್ ಮಾಡಿದ್ದು ಎಂದು ಗೊತ್ತಾಯಿತು. ಆತನು ಮಧ್ಯದಲ್ಲಿ ಇಲ್ಲವೆಂದಾದರೆ ಬನೂ ಲಹ್‌ಯಾನ್ ಗೋತ್ರಕ್ಕೆ ಮದೀನದ ಮೇಲೆ ದಾಳಿ ನಡೆಸುವ ಧೈರ್ಯ ಇರದು ಎಂದು ಅವರಿಗೆ ಗೊತ್ತಿತ್ತು. ಸುಫ್‌ಯಾನ್ ಹೊರತುಪಡಿಸಿ ಈ ರೀತಿಯ ಪ್ರಚೋದನೆಗೆ ನೇತೃತ್ವ ನೀಡುವಂತಹ ಪ್ರಭಾವಶಾಲಿ ವ್ಯಕ್ತಿ ಬೇರೆ ಇಲ್ಲವೆಂದೂ ಅವರಿಗೆ ತಿಳಿದಿತ್ತು. ಆದ್ದರಿಂದ ಸೇನಾ ತುಕಡಿಯನ್ನು ಕಳುಹಿಸುವುದರಿಂದ ಬಡ ಮುಸ್ಲಿಮರು ಸಂಕಷ್ಟಕ್ಕೆ ತುತ್ತಾಗುವ ಹಾಗೂ ದೇಶದಲ್ಲಿ ಕೊಲೆ ಮತ್ತು ರಕ್ತಪಾತದ ಬಾಗಿಲು ತೆರೆಯಲ್ಪಡುವ ಸಾಧ್ಯತೆಯನ್ನು ಮನಗಂಡು ಹಝ್ರತ್ ಪೈಗಂಬರ್(ಸ) ಹೀಗೆ ಯೋಜನೆ ಮಾಡಿಕೊಂಡರು: ಯಾವನಾದರೂ ಒಬ್ಬನು ಹೋಗಿ ಹೊಂಚು ಹಾಕಿ ಈ ಪಿತೂರಿಯ ಕಾರಣಕರ್ತನಾದ ಸುಫ್‌ಯಾನ್ ಬಿನ್ ಖಾಲಿದ್‌ನನ್ನು ವಧಿಸಲಿ. ಹಾಗೆ ಹಝ್ರತ್ ಪೈಗಂಬರ್(ಸ) ಈ ಉದ್ದೇಶಕ್ಕಾಗಿ ಅಬ್ದುಲ್ಲಾಹ್ ಬಿನ್ ಉನೈಸ್ ಅನ್ಸಾರಿ(ರ)ರನ್ನು ಕಳುಹಿಸಿದರು. ಅಬ್ದುಲ್ಲಾಹ್ ಬಿನ್ ಉನೈಸ್(ರ) ಅತ್ಯಂತ ಚಾಣಕ್ಯದಿಂದ ಬನೂ ಲಹ್‌ಯಾನಿನ ಕ್ಯಾಂಪಿಗೆ ತಲುಪಿದರು. ಗೋತ್ರದವರು ನಿಜವಾಗಿಯೂ ಮದೀನದ ಮೇಲೆ ದಾಳಿ ನಡೆಸುವ ತಯಾರಿಯಲ್ಲಿ ನಿರತರಾಗಿದ್ದರು. ಅಬ್ದುಲ್ಲಾಹ್(ರ) ರಾತ್ರಿ ಸಮಯದಲ್ಲಿ ತಕ್ಕುದಾದ ಸಂದರ್ಭವನ್ನು ನೋಡಿಕೊಂಡು ಸುಫ್‌ಯಾನನ್ನು ವಧಿಸಿದರು. ಬನೂ ಲಹ್‌ಯಾನ್ ಗೋತ್ರದವರಿಗೆ ಇದರ ಬಗ್ಗೆ ಗೊತ್ತಾದಾಗ ಅವರು ಅಬ್ದುಲ್ಲಾಹ್(ರ)ರನ್ನು ಹಿಂಬಾಲಿಸಿದರು. ಆದರೆ ಅವರು ತಪ್ಪಿಸಿಕೊಂಡು ಅಲ್ಲಿಂದ ಸುರಕ್ಷಿತವಾಗಿ ಹೊರಟು ಹೋದರು. ಹಝ್ರತ್ ಪೈಗಂಬರ್(ಸ)ರ ಮುಂದೆ ಅಬ್ದುಲ್ಲಾಹ್ ಬಿನ್ ಉನೈಸ್(ರ) ಬಂದಾಗ ಅವರ ಮುಖವನ್ನು ನೋಡಿದಾಗಲೇ ಅವರು ತಮ್ಮ ಉದ್ದೇಶದಲ್ಲಿ ಯಶಸ್ವಿಯಾಗಿರುವರು ಎಂದು ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾಯಿತು. ಹಾಗೆ ಅವರನ್ನು ನೋಡುತ್ತಲೇ ಹಝ್ರತ್ ಪೈಗಂಬರ್(ಸ) ಹೇಳಿದರು: **ಅಫ್‌ಲಹಲ್ ವಜ್‌ಹು**. ಯಶಸ್ವಿಯಾಗಿದೆ ಎಂದು ಮುಖದಿಂದ ತಿಳಿದು ಬರುತ್ತಿದೆ. ಅಬ್ದುಲ್ಲಾಹ್(ರ) ಬಹಳ ಚೆನ್ನಾಗಿ ಹೀಗೆ ಹೇಳಿದರು: **ಅಫ್‌ಲಹ ವಜ್‌ಹುಕ ಯಾ ರಸೂಲಲ್ಲಾಹ್**. ಯಾ ರಸೂಲಲ್ಲಾಹ್, ಎಲ್ಲ ವಿಜಯ ನಿಮ್ಮದು. ಆಗ ಹಝ್ರತ್ ಪೈಗಂಬರ್(ಸ) ತನ್ನ ಕೈಯಲ್ಲಿದ್ದ ಬಡಿಗೆಯನ್ನು ಅಬ್ದುಲ್ಲಾಹ್(ರ)ರಿಗೆ ಬಹುಮಾನವಾಗಿ ದಯಪಾಲಿಸಿದರು ಮತ್ತು 'ಈ ಬಡಿಗೆ ನಿನಗೆ ಸ್ವರ್ಗದಲ್ಲಿ ಆಸರೆಯಾಗುವುದು' ಎಂದು ಹೇಳಿದರು. ಅಬ್ದುಲ್ಲಾಹ್(ರ) ಆ ಅನುಗ್ರಹೀತ ಬಡಿಗೆಯನ್ನು ಅತ್ಯಂತ ಪ್ರೀತಿ ಮತ್ತು ನಿಷ್ಠೆಯೊಂದಿಗೆ ತನ್ನ ಬಳಿಯಲ್ಲಿ ಇರಿಸಿದರು. ಅದನ್ನು ತನ್ನ ಜೊತೆಗೆ ದಫನ್ ಮಾಡಬೇಕು ಎಂದು ಮರಣ ಸಮಯದಲ್ಲಿ ಅವರು ಉಯಿಲು ಮಾಡಿದರು. ಹಾಗೆಯೇ ಮಾಡಲಾಯಿತು. ಅಬ್ದುಲ್ಲಾಹ್(ರ) ಯಶಸ್ವಿಯಾಗಿ ಮರಳಿ ಬಂದಾಗ ಹಝ್ರತ್ ಪೈಗಂಬರ್(ಸ) ಸಂತೋಷಪಟ್ಟದ್ದು ಮತ್ತು ಅವರಿಗೆ ನೀಡಿದ ವಿಶಿಷ್ಟ ಬಹುಮಾನದಿಂದ ಗೊತ್ತಾಗುವುದೇನೆಂದರೆ, ಹಝ್ರತ್ ಪೈಗಂಬರ್(ಸ) ಸುಫ್‌ಯಾನ್ ಬಿನ್ ಖಾಲಿದ್‌ನ ಪಿತೂರಿಯನ್ನು ಅತ್ಯಂತ ಅಪಾಯಕಾರಿಯಾಗಿ ಭಾವಿಸುತ್ತಿದ್ದರು ಮತ್ತು ಆತನನ್ನು ವಧಿಸುವುದು ಸಾರ್ವಜನಿಕ ಸುರಕ್ಷೆಗಾಗಿ ಒಂದು ಕಾರುಣ್ಯವಾಗುವುದೆಂದು ಭಾವಿಸುತ್ತಿದ್ದರು ಎಂದಾಗಿದೆ. (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-512-513)

ಹಝ್ರತ್ ಪೈಗಂಬರ್(ಸ) ಶಾಂತಿಭಂಗ ಮಾಡಿದರು ಮತ್ತು ಮನುಷ್ಯ ಜೀವವನ್ನು ಕೊಂದು ಹಾಕಿದರು ಎಂದು ಶತ್ರುಗಳು ಆಕ್ಷೇಪಿಸುತ್ತಾರೆ. ಆದರೆ ಮನುಷ್ಯರ ಜೀವಕ್ಕೆ ಹಝ್ರತ್ ಪೈಗಂಬರ್(ಸ) ನೀಡುತ್ತಿದ್ದ ಬೆಲೆಯ ಮಟ್ಟವೇನೆಂದರೆ, ಶತ್ರು ಗೋತ್ರದ ಜನರ ಜೀವವನ್ನು ಕೂಡ ರಕ್ಷಿಸಲಿಕ್ಕಾಗಿ ಪಿತೂರಿ ಉಂಟುಮಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ಮಾತ್ರ ಕೊಲ್ಲಲು ಅವರು ಯೋಜನೆ ಹಾಕಿದರು. ಇದು ಮಾನುಷಿಕ ಸಹಾನುಭೂತಿಯ ಅತ್ಯುನ್ನತ ಮಟ್ಟವಾಗಿದೆ. ಇಂದಿನ ತಥಾಕಥಿತ ಲೋಕವು ಕೆಲವು ಜನರನ್ನು ಕೊಲ್ಲುವ ನೆಪದಿಂದ ಮುಗ್ಧ ಮಕ್ಕಳನ್ನು, ಮಹಿಳೆಯರನ್ನು ಮತ್ತು ವೃದ್ಧರನ್ನು ಕೊಲ್ಲುತ್ತಿದ್ದಾರೆ ಹಾಗೂ ಇವೆಲ್ಲವೂ ಯುದ್ಧದಲ್ಲಿ ಸಾಮಾನ್ಯವೆಂದು ಬಹಳ ಅಹಂಕಾರದಿಂದ ಹೇಳಿಕೊಳ್ಳುತ್ತಾರೆ. ಯುದ್ಧದಲ್ಲಿ ನೇರವಾಗಿ ಭಾಗಿಯಾಗಿರದ ಯಾವನೇ ಧಾರ್ಮಿಕ ವ್ಯಕ್ತಿ, ಮಗು ಮತ್ತು ಮಹಿಳೆಯನ್ನು ಕೊಲ್ಲಬಾರದು ಎಂದು ಯುದ್ಧದ ವೇಳೆಯೂ ಹಝ್ರತ್ ಪೈಗಂಬರ್(ಸ) ಆದೇಶ ನೀಡುತ್ತಿದ್ದರು. (ಸುನನ್ ಅಬಿ ದಾವೂದ್, ಕಿತಾಬುಲ್ ಜಿಹಾದ್, ಹದೀಸ್-2614) (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-1, ಪುಟ-768, ಹದೀಸ್-2728, ಆಲಮುಲ್ ಕುತುಬ್ ಬೈರುತ್ 1998)

ಒಟ್ಟಿನಲ್ಲಿ ಇದಾಗಿದೆ ಮುಹಮ್ಮದ್(ಸ)ರ ಮಾದರಿ ಮತ್ತು ಇಸ್ಲಾಮಿನ ಬೋಧನೆ.

ಈಗ ನಾನು ಸರಿಯ ರಜೀಅ್ ಬಗ್ಗೆ ಉಲ್ಲೇಖಿಸುತ್ತೇನೆ ಇದು ದೀರ್ಘವಾದ ವಿವರಣೆಯಾಗಿದೆ. ಆದ್ದರಿಂದ ಇಂದು ಅದರ ಸ್ವಲ್ಪ ಭಾಗವನ್ನು ಮಾತ್ರ ಮುಂದಿರಿಸುತ್ತೇನೆ, ಅದರ ನಾಯಕ ಮರ್ಸದ್ ಬಿನ್ ಅಬಿ ಮರ್ಸದ್ ಎಂಬ ಕಾರಣದಿಂದ ಈ ಸರಿಯಾವನ್ನು ಸರಿಯಾ ಮರ್ಸದ್ ಬಿನ್ ಅಬಿ ಮರ್ಸದ್ ಎಂದೂ ಸಹ ಕರೆಯಲಾಗುತ್ತದೆ, ಆದರೆ ಹೆಚ್ಚು ಪ್ರಸಿದ್ಧವಾದ ಹೆಸರು ರಾಜೀಅ್ ಆಗಿದೆ. (ತಬಖಾತುಲ್ ಕುಬ್ರ, ಸಂಪುಟ-2, ಪಉಟ-42, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1990)

ಹಿಜಾಝ್‌ನಲ್ಲಿ ರಜೀಅ್ ಬನೂ ಹುಝೈಲ್‌ನ ಕಾರಂಜಿ ಇತ್ತು. ಇದರ ಪ್ರಸ್ತುತ ಹೆಸರು ವಾತಿಯಾ ಎಂದಾಗಿದೆ, ಇದು ಮಕ್ಕಾದಿಂದ ಎಪ್ಪತ್ತು ಕಿಲೋಮೀಟರ್ ದೂರದಲ್ಲಿ ಉತ್ತರದಲ್ಲಿದೆ. (ದಾಎರಾ ಮುಆರಿಫ್ ಸೀರತ್-ಉಲ್-ನಬಿ ರಸುಲುಲ್ಲಾಹ್(ಸ), ಸಂಪುಟ-7, ಪುಟಗಳು 139, 138 ಬಜ್ಮ್ ಇಕ್ಬಾಲ್ ಲಾಹೋರ್ 2022)

ಈ ಸರಿಯವು ಸಫರ್ ತಿಂಗಳು ನಾಲ್ಕು ಹಿಜ್ರಿಯ ಆರಂಭದಲ್ಲಿ ರಜೀಅ್ ಎಂಬ ಸ್ಥಳದಲ್ಲಿ ಸಂಭವಿಸಿತು. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-6, ಪುಟ-447, ದಾರುಸ್ಸಲಾಮ್ ರಿಯಾದ್, 1434 ಹಿಜರಿ)

ಇಬ್ನ್ ಇಸ್‌ಹಾಕ್(ರಹ್) ಮತ್ತು ಇಬ್ನ್ ಹಿಶಾಮ್(ರಹ್) ಪ್ರಕಾರ, ಈ ಸರಿಯವು ಉಹುದ್ ಯುದ್ಧದ ನಂತರ ಮೂರನೇ ವರ್ಷದಲ್ಲಿ ನಡೆಯಿತು. ಇದು ಮೂರನೇ ವರ್ಷದ ಕೊನೆಯಲ್ಲಿ ಸಂಭವಿಸಿದೆ ಎಂದು ಶರಹ್ ಅಲ್-ಬುಖಾರಿ ಅಲ್-ಫತ್ ಅಲ್-ಬಾರಿ ಮತ್ತು ಅಲ್-ಮವಾಹಿಬ್‌ನಲ್ಲಿ ಬರೆಯಲಾಗಿದೆ. (ಸೀರತ್ ಇಬ್ನ್

ಇಸ್‌ಹಾಕ್, ಪುಟ–371, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2004) (ಇಬ್ನ್ ಹಿಶಾಮ್, ಪುಟ–591, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, 2001) (ಫತ್‌ಹ್ ಅಲ್–ಬಾರಿ, ಸಂಪುಟ–7, ಪುಟ–483, ಕುತುಬ್ ಖಾನ ಆರಾಮ್‌ಬಾಗ್ ಕರಾಚಿ) (ಅಲ್–ಮುವಾಹಿಬ್ ಅಲ್–ಲುದ್ನಿಯಾಹ್, ಸಂಪುಟ–1, ಪುಟ–416, ಅಲ್–ಮುಕ್ತಾಬ್ ಅಲ್–ಇಸ್ಲಾಮಿ, ಬೈರುತ್, 2004)

ಸರಿಯ ರಜೀಅ್‌ನ ಕುರಿತು ನಮ್ಮ ರಿಸರ್ಚ್ ಸೆಲ್ ಒಂದು ಟಿಪ್ಪಣಿಯನ್ನು ನೀಡಿದೆ. ಕೆಲವು ದಿನಾಂಕಗಳ ವ್ಯತ್ಯಾಸ ಕಂಡು ಬರುತ್ತಿದೆ. ಆದರೆ, ಸಂಶೋಧನೆ ಮಾಡುವವರಿಗೆ ಅನುಕೂಲವಾಗಬಹುದು, ಆದ್ದರಿಂದ ಅವರ ಅನುಕೂಲಕ್ಕಾಗಿ ನಾನು ಇದನ್ನು ಸಹ ಪ್ರಸ್ತಾಪಿಸುತ್ತೇನೆ, ಇತಿಹಾಸ ಮತ್ತು ಜೀವನಚರಿತ್ರೆ ಪುಸ್ತಕಗಳಲ್ಲಿ, ಸರಿಯಾ ರಜೀಅ್ ಮತ್ತು ಬೀರೆ ಮಾಊನದ ಘಟನೆಗಳನ್ನು ಬೆರೆಸಲಾಗಿದೆ ಮತ್ತು ಕೆಲವು ಜೀವನಚರಿತ್ರೆಕಾರರು ಅದರ ಕಡೆಗೆ ಗಮನ ಸೆಳೆದಿದ್ದಾರೆ. ಮುತ್ತು ಅದರಲ್ಲಿ ಒಂದು ತಪ್ಪು ಆಗಿರುವುದೇನೆಂದರೆ ಹೆಚ್ಚಿನ ಜೀವನಚರಿತ್ರೆಕಾರರು ಸರಿಯ ರಜೀಅ್‌ಯ ದಿನಾಂಕವನ್ನು ಸಫರ್ 4 ಹಿಜ್ರಿ ಎಂದು ಬರೆದಿದ್ದಾರೆ ಮತ್ತು ಅದರ ವಿವರಣೆ ಹೀಗೆ ಬರೆದಿದ್ದಾರೆ: ಹಝ್ರತ್ ಖುಬೈಬ್(ರ) ಮತ್ತು ಹಝ್ರತ್ ಝ್ಶೈದ್(ರ) ಅವರನ್ನು ಮಕ್ಕಾದಲ್ಲಿ ಮಾರಾಟ ಮಾಡಲಾಗಿತ್ತು ಆದರೆ ಪವಿತ್ರ ಮಾಸಗಳು ಪ್ರಾರಂಭವಾಗಿದ್ದರಿಂದ ಮಕ್ಕಾದ ಜನರು ಅವರನ್ನು ಸೇರೆಯಲ್ಲಿರಿಸಿದ್ದರು ಮತ್ತು ಪವಿತ್ರ ಮಾಸಗಳು ಮುಗಿದ ನಂತರ ಇಬ್ಬರನ್ನೂ ವಧಿಸಲಾಯಿತು. ಇದನ್ನು ಹೆಚ್ಚಿನ ಜೀವನಚರಿತ್ರೆಕಾರರು ಹೇಳಿದ್ದಾರೆ ಆದರೆ ಅದರ ಬಗ್ಗೆ ಗಾಂಭೀರ್ಯದಿಂದ ಅವಲೋಕಿಸಿದಾಗ, ಪವಿತ್ರ ಮಾಸಗಳು ನಾಲ್ಕು ಇವೆ. ಮೂರು ಸತತವಾಗಿವೆ ಅವುಗಳೆಂದರೆ ಧುಲ್ ಖಅದಃ, ಝುಲ್ ಹಜ್ಜ ಮತ್ತು ಮುಹರ್ರಮ್ ಮತ್ತು ನಾಲ್ಕನೇ ತಿಂಗಳು ಮುಹರ್ರಮ್‌ನ ಐದು ತಿಂಗಳ ನಂತರ ರಜಬ್ ಸಂಪಿಸುತ್ತದೆ. ಈಗ, ಸಫರ್‌ನಲ್ಲಿ ಈ ಸರಿಯಾವು ನಡೆದಿರುವಾಗ, ಮೂರು ಪವಿತ್ರ ಮಾಸಗಳು ಈಗಾಗಲೇ ಕಳೆದಿದ್ದವು, ಈಗ ಸಫರ್‌ನ ನಾಲ್ಕು ತಿಂಗಳ ನಂತರ ನಾಲ್ಕನೇ ಪವಿತ್ರ ಮಾಸ ಸಂಭವಿಸಬೇಕಾಗಿತ್ತು. ಆದ್ದರಿಂದ ಈ ಸರಿಯವು ಸಫರ್ 4 ಹಿಜರಿ ಎಂಬ ಒಪ್ಪುವುದಾದರೆ ಅದರ ನಂತರದ ಪವಿತ್ರ ಮಾಸಗಳು ಸಹ ಪ್ರಾರಂಭವಾಗಬೇಕು ಇದು ಸಾಮಾನ್ಯ ಜ್ಞಾನಕ್ಕೆ ವಿರುದ್ಧವಾಗಿದೆ ಮತ್ತು ಅದೇ ರೀತಿ, ಪವಿತ್ರ ಮಾಸಗಳು ಇರಲಿಲ್ಲ ಎಂದಾದರೂ ಅವರಿಬ್ಬರನನ್ನು ದೀರ್ಘ ಕಾಲ ಸೆರೆಯಲ್ಲಿಡುವುದಕ್ಕೆ ಯಾವುದೇ ಸಮರ್ಥನೆ ಇಲ್ಲ. ಮಕ್ಕದ ಜನರು ಅವರ ಸೇಡು ತೀರಿಸಿಕೊಳ್ಳಲು ಆದಷ್ಟು ಬೇಗ ಅವರನ್ನು ಕೊಂದು ಅವರ ಸೇಡಿನ ದಾಹವನ್ನು ನೀಗಿಸಿಕೊಳ್ಳಲು ಬಯಸಿದ್ದರು ಹೀಗಿರುವಾಗ ಅವರಿಗೆ ಸೆರೆಯಲ್ಲಿರಿಸಿ ಅವರಿಗೆ ಆಹಾರ ಮತ್ತು ಭದ್ರತೆಯ ಭಾರವನ್ನು ತಲೆಯ ಮೇಲೆ ಹೊತ್ತುಕೊಳ್ಳಬೇಕೆನ್ನುವ ಅಗತ್ಯವೇನಿತ್ತು. ಈ ಸರಿಯವು 4 ಹಿಜರಿಯಲ್ಲಿ ಸಂಭವಿಸಿದೆ ಎಂದು ನಿರೂಪಿಸುವ ಜೀವನಚರಿತ್ರೆಕಾರರು ಮತ್ತು ಇತಿಹಾಸಕಾರರು ಈ ಪ್ರಶ್ನೆಗಳನ್ನು ಎತ್ತಲಿಲ್ಲ. ನಮಗೆ ಎರಡು ಆಯ್ಕೆಗಳಲ್ಲಿ ಒಂದನ್ನು ಹೊಂದಿದೆ: ಪವಿತ್ರ ಮಾಸಗಳು ಮತ್ತು ನಿರ್ದಿಷ್ಟ ಅವಧಿಗೆ ಅವುಗಳ ಬಂಧನವು ಸರಿಯಾಗಿಲ್ಲ ಎಂದು ಹೇಳುವುದು ಅಥವಾ ಈ ಎಲ್ಲಾ ವರದಿಗಳು ಸರಿಯಾಗಿವೆ ಅಂದರೆ ಪವಿತ್ರ ಮಾಸಗಳು ಸಹ ಪ್ರಾರಂಭವಾಗುತ್ತವೆ ಮತ್ತು  ಅವರು ಒಂದು ಕಾಲದವರೆಗೆ ಅವರು ಸೆರೆಯಲ್ಲಿದ್ದರು ಎಂದು ಹೇಳಬೇಕಾಗುತ್ತದೆ. ಇಂತಹ ನಿಲುವು ಹೊಂದಿದರೆ ಈ ಸರಿಯದ ಇತಿಹಾಸವನ್ನು ಸಂರಕ್ಷಿಸುವಲ್ಲಿ ಹೆಚ್ಚಿನ ಇತಿಹಾಸಕಾರರು ಮತ್ತು ಜೀವನಚರಿತ್ರೆಕಾರರು ಯಶಸ್ವಿಯಾಗಿದ್ದಾರೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ, ಮತ್ತು ಕೆಲವೇ ಕೆಲವು ಇತಿಹಾಸಕಾರರ ಮಾತುಗಳು ಯೋಗ್ಯವಾಗಿವೆ, ಅವರಿಬ್ಬರು ಮಕ್ಕಾದಲ್ಲಿ ಮಾರಾಟವಾದಾಗ, ಧುಲ್‌ಖಅದಃ ಪ್ರಾರಂಭವಾಗಿತ್ತು. ಹೀಗಾಗಿ, ಜೀವನಚರಿತ್ರೆಯ ಆರಂಭಿಕ ಪುಸ್ತಕಗಳಲ್ಲಿ ಒಂದಾದ ಸೀರತ್ ಇಬ್ನ್–ಎ–ಇಸ್‌ಹಾಕ್ ಮತ್ತು ಇಬ್ನ್–ಎ–ಹಿಶಾಮ್, ಸರಿಯ ರಜೀಅ್‌ಯ ಇತಿಹಾಸವನ್ನು ವಿವರಿಸುವಾಗ, ಇಬ್ಬರೂ ಈ ಸರಿಯವು ಉಹುದ್ ಯುದ್ಧದ ನಂತರ ಮೂರು ಹಿಜ್ರಿಯಲ್ಲಿ ನಡೆದಿದೆ ಎಂದು ಬರೆದಿದ್ದಾರೆ. ಮತ್ತು ಬುಖಾರಿಯ ಪ್ರಸಿದ್ಧ ಮತ್ತು ಅಧಿಕೃತ ವ್ಯಾಖ್ಯಾನಕಾರ, ಇಬ್ನ್ ಹಜರ್ ಫತೇ ಅಲ್–ಬಾರಿಯಲ್ಲಿ ಈ ಘಟನೆಯು 3 ಹಿಜ್ರಿಯ ಕೊನೆಯಲ್ಲಿ ಸಂಭವಿಸಿದೆ ಎಂದು ಉಲ್ಲೇಖಿಸಲಾಗಿದೆ ಮತ್ತು ಅದನ್ನು ಜೀವನಚರಿತ್ರೆಯ ಮತ್ತೊಂದು ಅಧಿಕೃತ ಪುಸ್ತಕ, ಮವಾಹಿಬ್ ಅಲ್–ದುನಿಯಾ ಸಹ ಹೀಗೆಯೇ ಬರೆದಿದ್ದಾರೆ, ಆದ್ದರಿಂದ ಈ ಸರಿಯ ಹಿಜರೀ 3, ಶವ್ವಾಲ್ ತಿಂಗಳ ಕೊನೆಯ ದಿನಗಳಲ್ಲಿ ನಡೆದಿತ್ತು ಎಂದು ಹೇಳುವುದು ಸರಿಯೆಂದು ತಿಳಿದುಬರುತ್ತದೆ. ಹಝ್ರತ್ ಖುಬೈಬ್(ರ) ಮತ್ತು ಹಝ್ರತ್ ಝ್ಶೈದ್(ರ)ರನ್ನು ಹಿಜರೀ 4, ಸಫರ್ ತಿಂಗಳಲ್ಲಿ ಶಹೀದ್ ಮಾಡಲಾಗಿತ್ತು. ಅವರು ಶಹೀದ್ ಆದ ಸುದ್ದಿ ಮದೀನಕ್ಕೆ ತಲುಪಿದಾಗ ಯುದ್ಧ ನಡೆದದ್ದು ಸಫರ್ ತಿಂಗಳಲ್ಲಿ ಎಂಬ ವರದಿಗಳು ಕ್ರಮೇಣ ಹೆಚ್ಚು ಪ್ರಬಲವಾಯಿತು.

ಆದಾಗ್ಯೂ ಅಲ್ಲಾಹನು ಬಲ್ಲನು. ಈ ಸರಿಯದ ಕುರಿತು ಹೀಗೆ ಬರೆಯಲಾಗಿದೆ: ಬನೂ ಲಹ್‌ಯಾನಿನ ಸರದಾರನ ವಧೆಯ ಕಾರಣದಿಂದ ಆ ಗೋತ್ರವು ಪ್ರತೀಕಾರದ ಬೆಂಕಿಯಲ್ಲಿ ಉರಿಯುತ್ತಿತ್ತು ಮತ್ತು ಮುಸ್ಲಿಮರ ಮೇಲೆ ಸೇಡು ತೀರಿಸಲು ಯೋಚಿಸುತ್ತಿತ್ತು. ಆದ್ದರಿಂದ ಈ ಗೋತ್ರದ ಕೆಲವು ಜನರು ಅಝಲ್ ಮತ್ತು ಖಾರ ಎಂಬ ಗೋತ್ರದವರ ಬಳಿಗೆ ಬಂದರು. ಈ ಜನರು ಬಿಲ್ಲುಗಾರಿಕೆಯಲ್ಲಿ ಬಹಳ ಪರಿಣತರಾಗಿದ್ದರು. "ಅಝಲ್ ಗೋತ್ರದಲ್ಲಿ ಬನು ಹೂನ್ ಇಬ್ನೆ ಖುಝಿಮಾದ ಒಂದು ಶಾಖೆಯಾಗಿದ್ದು, ಇದನ್ನು ಅಝಲ್ ಇಬ್ನ್ ದೈಶ್ ಎಂದು ಹೇಳಲಾಗುತ್ತಿತ್ತು. ಖಾರ ಗೋತ್ರವು ಕೂಡ ದೇಶ್‌ಗೆ ಸೇರಿದ ಹೂನರ ಶಾಖೆಯಾಗಿತ್ತು. ಬನೂ ಲಹ್ಯಾನ್‌ನವರು ಅವರಿಗೆ ಹೇಳಿದರು: ನೀವು ಮುಹಮ್ಮದ್(ಸ)ರ ಬಳಿ ಮದೀನಾಗೆ ಹೋಗಿ ಅವರ ಕೆಲವು ಜನರನ್ನು ನಿಮ್ಮ ಗೋತ್ರದವರಿಗೆ ಇಸ್ಲಾಮ್ ಧರ್ಮವನ್ನು ಬೋಧಿಸಲು ನಿಮ್ಮೊಂದಿಗೆ ಕಳುಹಿಸಲು ವಿನಂತಿಸಬೇಕು. ಮತ್ತು ಮುಹಮ್ಮದ್(ಸ)ರವರು ನಿಮ್ಮೊಂದಿಗೆ ತಮ್ಮಕೆಲವು ಸಹಾಬಿಯರನ್ನು ಕಳುಹಿಸುತ್ತಾರೆ ಎಂಬ ಪೂರ್ಣ ಭರವಸೆ ನಮಗಿದೆ. ಹೀಗೆ ಮುಹಮ್ಮದ್(ಸ)ರ ಸಹಾಬಿಯರು ನಿಮ್ಮೊಂದಿಗೆ ಬಂದಾಗ, ನಾವು ಅವರನ್ನು ಮಕ್ಕಾದ ಖುರೈಶಿಗಳಿಗೆ ಮಾರಾಟ ಮಾಡುತ್ತೇವೆ, ಅದಕ್ಕಾಗಿ ನಾವು ಭಾರೀ ಬೆಲೆಯನ್ನು ಪಡೆಯುತ್ತೇವೆ ಮತ್ತು ಮಕ್ಕಾದ ಜನರು ಅವರನ್ನು ವಧಿಸುತ್ತಾರೆ ಹೀಗೆ ನಮ್ಮ ಸೇಡು ತೀರಿಸಿಕೊಳ್ಳಬಹುದು ಮತ್ತು ನಮಗೆ ಸಿಗುವ ಸಂಪತ್ತಿನಿಂದ ನಿಮಗೆ ಒಂದು ಭಾಗವು ಲಭಿಸುವುದು. ಆದ್ದರಿಂದ ಈ ನಿಯಮಿತ ಯೋಜನೆಯೊಂದಿಗೆ ಅಝ್ಲ್ ಮತ್ತು ಖಾರ ಗೋತ್ರಗಳ ಕೆಲವರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ನಮ್ಮ ಗೋತ್ರದಲ್ಲಿ ಇಸ್ಲಾಂ ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಆದ್ದರಿಂದ ಅಲ್ಲಿ ಇಸ್ಲಾಮಿನ ಸಂದೇಶ ತಲುಪಿಸುವ ಕೆಲಸವನ್ನು ಮಾಡಲು ನೀವು ನಿಮ್ಮ ಕೆಲವು ಜನರನ್ನು ನಮ್ಮ ಜೊತೆಗೆ ಕಳುಹಿಸಿರಿ. ಹಝ್ರತ್ ಪೈಗಂಬರ್(ಸ) ಅವರ ಜೊತೆಗೆ ಕೆಲವು ವ್ಯಕ್ತಿಗಳನ್ನು ಕಳುಹಿಸಿದರು. ಚರಿತ್ರೆಯ ಬಹುತೇಕ ಗ್ರಂಥಗಳಲ್ಲಿ 10 ಸಹಾಬಿಯರನ್ನು ಕಳುಹಿಸಲಾಗಿತ್ತು ಎಂಬ ಪ್ರಸ್ತಾಪವಿದೆ. (ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ–6, ಪುಟಗಳು 448–449, ದಾರುಸ್ಸಲಾಮ್ ರಿಯಾದ್, 1434 ಹಿಜರಿ)

ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ)ರವರು ಅವರೊಂದಿಗೆ ಏಳು ಜನರನ್ನು ಕಳುಹಿಸಿದರು ಎಂದು ಪ್ರಸ್ತಾಪಿಸಲಾಗಿದೆ. (ಸಬ್ಲುಲ್ ಹುದಾ ವಾಲ್–ರಶಾದ್, ಸಂಪುಟ–6, ಪುಟ–40, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಇಬ್ನ್ ಹಿಶಾಮ್ ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ಈ ಜನರೊಂದಿಗೆ ಆರು ಸಹಾಬೀಯರನ್ನು ಕಳುಹಿಸಿದ್ದಾರೆ. ಇಬ್ನ್ ಸಅದ್ ಅವರಲ್ಲಿ ಹತ್ತು ಮಂದಿ ಇದ್ದರು ಎಂದು ಹೇಳಿದ್ದಾರೆ ಮತ್ತು ಅವರಲ್ಲಿ ಏಳರ ಹೆಸರುಗಳನ್ನು ಉಲ್ಲೇಖಿಸಿದ್ದಾರೆ.
(ಸೀರತ್ ಇಬ್ನ್ ಹಿಶಾಮ್, ಪುಟ–432, ದಾರ್ ಇಬ್ನ್ ಹಝ್ಮ್ ಬೈರುತ್) (ಸಬ್ಲುಲ್ ಹುದಾ ವಾಲ್–ರಶಾದ್, ಸಂಪುಟ–6, ಪುಟ–39, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಲೆಬನಾನ್)

ಸಹೀಹ್ ಬುಖಾರಿಯಲ್ಲಿ ಹತ್ತು ಜನರನ್ನು ಉಲ್ಲೇಖಿಸಲಾಗಿದೆ. ಜೀವನಚರಿತ್ರೆಯ ಹೆಚ್ಚಿನ ಪುಸ್ತಕಗಳಲ್ಲಿ, ಹತ್ತು ಸಹಚರರ ಉಲ್ಲೇಖವಿದೆ, ಆದರೆ ಏಳು ಸಹಚರರ ಹೆಸರುಗಳು ಮಾತ್ರ ಕಂಡುಬರುತ್ತವೆ. ಹಝ್ರತ್ ಪೈಗಂಬರ್(ಸ) ಅಸೀಮ್ ಬಿನ್ ಸಾಬಿತ್(ರ) ಅವರನ್ನು ನೇಮಿಸಿದರು ಮತ್ತು ಕೆಲವರು ಮರ್ಸದ್ ಬಿನ್ ಅಬಿ ಮರ್ಸದ್ ಘನವಿ ಅವರನ್ನು ಅಮೀರ್ ಎಂದು ಹೇಳಿದರು. (ಸಹೀಹ್ ಬುಖಾರಿ ಕಿತಾಬ್ ಅಲ್–ಮಘಾಜಿ ಅಧ್ಯಾಯ ಫಝುಲ್ ಮಿನ್ ಶಾದ್ ಬದ್ರ್ ಹದೀಸ್–3989) (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–42, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: "ಹಿಜ್ರತ್ತಿನ ನಾಲ್ಕನೇ ವರ್ಷದಲ್ಲಿ, ಎರಡು ಅರಬ್ ಗೋತ್ರಗಳು, ಅಝುಲ್ ಮತ್ತು ಖಾರಾ, ತಮ್ಮ ಪ್ರತಿನಿಧಿಗಳನ್ನು ಹಝ್ರತ್ ಪೈಗಂಬರ್(ಸ.ಅ)ರ ಸನ್ನಿಧಿಗೆ ಕಳುಹಿಸಿ ಹೀಗೆ ಹೇಳಿದರು: ನಮ್ಮ ಗೋತ್ರಗಳಲ್ಲಿ ಅನೇಕ ಪುರುಷರು ಇಸ್ಲಾಂ ಧರ್ಮದ ಕಡೆಗೆ ಒಲವು ತೋರುತ್ತಿದ್ದಾರೆ ಆದ್ದರಿಂದ ಇಸ್ಲಾಂ ಧರ್ಮದ ಬೋಧನೆಗಳ ಬಗ್ಗೆ ಸಂಪೂರ್ಣ ಪರಿಚಯವಿರುವ ಕೆಲವು ಜನರನ್ನು ಅವರ ನಡುವೆ ವಾಸಿಸಲು ಮತ್ತು ಅವರಿಗೆ ಈ ಹೊಸ ಧರ್ಮವನ್ನು ಬೋಧಿಸಲು ಕಳುಹಿಸಬೇಕೆಂದು ಅವರು ವಿನಂತಿಸಿಕೊಂಡರು. ವಾಸ್ತವವೇನೆಂದರೆ, ಇದು ಇಸ್ಲಾಮಿನ ಬದ್ಧ ವೈರಿ ಬನುಲಹ್ಯಾನ್ ಮಾಡಿದ

ಪಿತೂರಿಯಾಗಿತ್ತು ಮತ್ತು ಈ ಪ್ರತಿನಿಧಿಗಳು ಮುಸ್ಲಿಮರನ್ನು ಕರೆತರಲು ಬಂದಾಗ "ಅವರು ಅವರನ್ನು ಕೊಂದು ತಮ್ಮ ಮುಖ್ಯಸ್ಥ ಸುಫ್ಯಾನ್ ಬಿನ್ ಖಾಲಿದ್ ಮೇಲೆ ಸೇಡು ತೀರಿಸಿಕೊಳ್ಳುತ್ತಾರೆ" ಎಂಬುದು ಅವರ ಉದ್ದೇಶವಾಗಿತ್ತು. ಆದ್ದರಿಂದ ಅವರು ತಮ್ಮೊಂದಿಗೆ ಕೆಲವು ಮುಸ್ಲಿಮರನ್ನು ಕರೆತರುವ ಉದ್ದೇಶದಿಂದ ಹಝ್ರತ್ ಪೈಗಂಬರ್(ಸ) ಅವರ ಸೇವೆಗೆ 'ಅಝ್ಹಲ್ ಮತ್ತು ಖಾರಾ' ಪ್ರತಿನಿಧಿಗಳನ್ನು ಕಳುಹಿಸಿದರು. ಅಝ್ಹಲ್ ಮತ್ತು ಖಾರಾ'ದ ಜನರು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದು ವಿನಂತಿಸಿದಾಗ, ಹಝ್ರತ್ ಪೈಗಂಬರ್(ಸ) ಅವರನ್ನು ನೊಂಬಿ ಅವರೊಂದಿಗೆ ಹತ್ತು ಮುಸ್ಲಿಮರನ್ನು ಇಸ್ಲಾಮಿನ ನಂಬಿಕೆಗಳು ಹಾಗೂ ಬೋಧನೆಗಳನ್ನು ತತ್ವಗಳನ್ನು ಬೋಧಿಸಲು ಕಳುಹಿಸಿದರು.

(ದೀಬಾಚಾ ತಫ್ಸೀರುಲ್ ಖುರ್ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–260)

ಹೀಗೆ ಈ ಜನರು ಅವರೊಂದಿಗೆ ಹೋದರು ಮತ್ತು ನಂತರ ಏನಾಯಿತು ಎಂದು ನಾನು ವಿವರಿಸುತ್ತೇನೆ, ಇನ್ಶಾಅಲ್ಲಾಹ್.

ಇಂದು ನಾನು ಪುನಃ ಯಮನಿನ ಬಂಧಿಗಳಿಗಾಗಿ ವಿಶೇಷವಾಗಿ ದುಆ ಮಾಡಲು ಹೇಳಬಯಸುತ್ತೇನೆ. ವಿಶೇಷವಾಗಿ ಅಲ್ಲಿಯ ಲಜ್ನ ಸದರ್ ಸಹ ಆಗಿರುವ ಮಹಿಳೆಗಾಗಿ. ಅವರನ್ನು ಬಹಳ ಕಷ್ಟತೆಗೆ ಗುರಿಪಡಿಸಿ ಬಂಧನದಲ್ಲಿ ಇರಿಸಲಾಗಿದೆ. ಬೇರೆ ಕೆಲವರು ಕೂಡ ಇದ್ದಾರೆ. ಅವರ ಮಾತುಗಳನ್ನು ಅನುಸರಿಸಲು ತಯಾರಾಗದೇ ಇರುವವರನ್ನು ಬಂಧಿಸಲಾಗಿದೆ. ಅವರಿಗಾಗಿ ವಿಶೇಷವಾಗಿ ದುಆ ಮಾಡಿರಿ. ಅಲ್ಲಾಹನು ಅವರನ್ನು ಬಿಡುಗಡೆಗೊಳಿಸುವಂತೆ ಮಾಡಲಿ. ಪಾಕಿಸ್ತಾನದಲ್ಲಿ ಸೆರೆಯಲ್ಲಿರುವವರಿಗಾಗಿಯೂ ದುಆ ಮಾಡಿರಿ. ಪೆಲಸ್ತೀನಿನ ಜನರಿಗಾಗಿಯೂ ದುಆ ಮಾಡುತ್ತಿರಿ. ಸ್ಥಿತಿಗತಿಗಳು ಉತ್ತಮಗೊಳ್ಳುವಂತೆ ಭಾಸವಾಗಿ ಪುನಃ ಕೆಟ್ಟು ಹೋಗುತ್ತಿವೆ. ಇಸ್ರೇಲ್ ಸರ್ಕಾರ ಅಹಂಕಾರದಿಂದ ವರ್ತಿಸುತ್ತಿದೆ. ಅಲ್ಲಾಹನು ಪೆಲಸ್ತೀನಿಯರನ್ನು ಇಸ್ರೇಲರ ಪೀಡನೆಯಿಂದ ಬೇಗನೇ ಮುಕ್ತಗೊಳಿಸಲಿ. ಮುಸ್ಲಿಮರಿಗೂ ತಮ್ಮ ಹಕ್ಕನ್ನು ಈಡೇರಿಸಲು ಅಲ್ಲಾಹನು ಸೌಭಾಗ್ಯ ನೀಡಲಿ.

**(ಅಲ್–ಫಝ್ಲ್ ಇಂಟರ್‌ನ್ಯಾಶನಲ್ ಡೈಲಿ, ಮೇ 31, 2024, ಪುಟ 2–6)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಸಮೂದಾಯವು ಗೌರವವನ್ನು ಪಡೆಯಲು ಬಯಸಿದರೆ, ಅದು ಎರಡರಿಂದಲೂ ಸಮಾನವಾಗಿ ಪ್ರಯೋಜನ ಪಡೆಯಬೇಕು.

ಪವಿತ್ರ ಖುರ್ಆನ್ ಅನ್ನು ಹಝ್ರತ್ ಪೈಗಂಬರ್(ಸ) ರಚಿಸಿದ್ದಾರೆ ಎಂದು ಜನರು ಹೇಳುತ್ತಾರೆ. ಈ ಸ್ಥಳದಲ್ಲಿ ವಿವರಿಸಲಾದ ಈ ವಿಷಯಗಳು ಅರಬ್ ನಿವಾಸಿಯ ಬಾಯಿಯಿಂದ ಹೊರಬರಬಹುದೇ? ಅದರಲ್ಲೂ ದೋಣಿಯಲ್ಲಿ ಎಂದಿಗೂ ಪ್ರಯಾಣಿಸದವರ ಬಾಯಿಂದ. ದುರದೃಷ್ಟವಶಾತ್, ಕಳೆದ ಕೆಲವು ಶತಮಾನಗಳಿಂದ ಮುಸ್ಲಿಮರು ಈ ಸಲಹೆಯನ್ನು ಮರೆತಿದ್ದಾರೆ ಮತ್ತು ಅವರ ಶಕ್ತಿ ದುರ್ಬಲಗೊಂಡಿದೆ. ಅವರು ಸಮುದ್ರ ನೌಕಾಪಡೆಗಳನ್ನು ಕಾಳಜಿ ವಹಿಸಿದ್ದರೆ, ಇಸ್ಲಾಂ ಈಗಿನಷ್ಟು ದುರ್ಬಲವಾಗುತ್ತಿರಲಿಲ್ಲ.

**ಫಝ್ಝಲ್‌ನಾಹುಮ್ ಅಲಾ ಕಸೀರಿಮ್ಮಿಮ್ಮನ್ ಖಲಖ್ನಾ** ನಿಂದ ಕೆಲವು ಜನರು ಮನುಷ್ಯ ಕೆಲವು ರೀತಿಯ ಜೀವಿಗಳಿಗಿಂತ ಶ್ರೇಷ್ಠರು ಎಂದು ವಾದಿಸುತ್ತಾರೆ, ಎಲ್ಲಾ ರೀತಿಯ ಜೀವಿಗಳಲ್ಲ. ಆದರೆ ಈ ತರ್ಕವು ತಪ್ಪಾಗಿದೆ ಏಕೆಂದರೆ ಈ ಸ್ಥಳದಲ್ಲಿ ಬನೀ ಆದಮ್‌ನ ಉಲ್ಲೇಖವು ಒಂದು ಜಮಾಅತ್‌ನ ರೀತಿಯಲ್ಲಿದೆ. ಮತ್ತು ಎಲ್ಲಾ ಮಾನವರು ಎಲ್ಲಾ ಜೀವಿಗಳಿಗಿಂತ ಉತ್ತಮವಾಗಿಲ್ಲ ಎಂಬುದರಲ್ಲಿ ಸಂದೇಹವಿಲ್ಲ. ಕೆಲವು ಮನುಷ್ಯರು ಅತ್ಯಂತ ಕೊಳಕಾಗಿದ್ದಾರೆ ಮತ್ತು ಪ್ರಾಣಿಗಳಿಗಿಂತ ಕೆಟ್ಟವರಾಗಿದ್ದಾರೆ. ಕೆಲವರು ಸ್ವಲ್ಪ ಒಳ್ಳೆಯ ಆತ್ಮಗಳು ಮತ್ತು ಪ್ರಾಣಿಗಳಿಗಿಂತ ಉತ್ತಮರು. ಮತ್ತು ಕೆಲವರು ತುಂಬಾ ಒಳ್ಳೆಯವರು ಮತ್ತು ಸಾಮಾನ್ಯ ದೇವದೂತರುಗಳಿಗಿಂತಲೂ ಉತ್ತಮರು. ಮತ್ತು ಕೆಲವರು ಉನ್ನತ ಸ್ಥಾನದಲ್ಲಿದ್ದಾರೆ ಮತ್ತು ಪ್ರಧಾನ ದೇವದೂತರುಗಳಿಗಿಂತಲೂ ಹೆಚ್ಚಿನವರಾಗಿದ್ದಾರೆ. ಆದ್ದರಿಂದ, ಎಲ್ಲಾ ಮಾನವರು ಎಲ್ಲಾ ಜೀವಿಗಳಿಗಿಂತ ಉತ್ತಮರಲ್ಲ, ಆದರೆ ಕೆಲವು ಮಾನವರು ಎಲ್ಲಾ ಜೀವಿಗಳಿಗಿಂತ ಉತ್ತಮರು, ಮತ್ತು ಮನುಷ್ಯರು ಹೆಚ್ಚಿನ ಜೀವಿಗಳಿಗಿಂತ ಉತ್ತಮರು, ಏಕೆಂದರೆ ಸೂರ್ಯ, ಚಂದ್ರ, ನಕ್ಷತ್ರಗಳು, ಕುದುರೆಗಳು, ಎತ್ತುಗಳು, ಒಂಟೆಗಳು, ಮೇಕೆಗಳು ಎಲ್ಲಾ ಅವಿಶ್ವಾಸಿ ಗಳು ಹಾಗೂ ವಿಶ್ವಾಸಿಗಳು ಎಲ್ಲಾ ಈ ಕೆಲಸವನ್ನು ಮಾಡುತ್ತವೆ. ಎಲ್ಲರಿಗೂ ಸೇವೆ ನೀಡಲಾಗುತ್ತದೆ. ಆದ್ದರಿಂದ, ಮನುಷ್ಯನು ಲೈಂಗಿಕತೆಯ ಹೆಚ್ಚಿನ ಜೀವಿಗಳಿಗಿಂತ ಶ್ರೇಷ್ಠನಾಗಿದ್ದಾನೆ ಮತ್ತು ಪರಿಪೂರ್ಣ ವ್ಯಕ್ತಿಯ ಎಲ್ಲಾ ಜೀವಿಗಳಿಗಿಂತ ಮನುಷ್ಯನು ಶ್ರೇಷ್ಠನಾಗಿದ್ದಾನೆ. **(ತ್ಫ್ಸೀರ್ ಕಬೀರ್, ಸಂಪುಟ 4, ಪುಟ 365, ಮುದ್ರಣ ಖಾದಿಯಾನ್, 2010)**

**(ಬದರ್ ಸಂಚಿಕೆ–23ರ ಪುಟ ಸಂಖ್ಯೆ–11ರ ಉಳಿದ ಭಾಗ)**

**ಪ್ಲೇಗ್ ಪೀಡಿತದಿಂದ ಮಗುವನ್ನು ಗುಣಪಡಿಸುವುದು:**

ಫಕ್ರುದ್ದೀನ್ ಸಾಹಿಬ್ ಅವರ ಪತ್ನಿ ಹೇಳುತ್ತಾರೆ: ಒಮ್ಮೆ ನಾನು ನನ್ನ ತಾಯ್ನಾಡಾದ ಮಯಾನಿಯಲ್ಲಿ ಇದ್ದೆ ಆಗ ನನ್ನ ಎರಡು ವರ್ಷದ ವಯಸ್ಸಿನ ಪುತ್ರ ಇಸ್ಹಾಖ್‌ನನ್ನು ಪ್ಲೇಗ್‌ನ ಎರಡು ಗಡ್ಡೆಗಳು ಕಾಣಿಸಿಕೊಂಡಿತು. ಆ ದಿನಗಳಲ್ಲಿ ಈ ರೋಗವು ಬಹಳ ವ್ಯಾಪಕವಾಗಿತ್ತು. ನಾವು ತುಂಬಾ ಹೆದರುತ್ತಿದ್ದೆವು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಲ್ಲಿ ದುಆವಿಗಾಗಿ ಪತ್ರವನ್ನು ಸಹ ಬರೆದಿದ್ದೇವು. ಒಂದು ತಿಂಗಳ ನಂತರ, ಹುಡುಗನು ಚೇತರಿಸಿಕೊಂಡನು ಮತ್ತು ಅವನನ್ನು ಖಾದಿಯಾನ್‌ಗೆ ಕರೆತರಲಾಯಿತು ಮತ್ತು ಹುಝೂರ್(ಅ) ಅವರ ಮುಂದೆ ಕಳುಹಿಸಿ ಪ್ಲೇಗ್ ರೋಗದಲ್ಲಿ ಬಳಲುತ್ತಿದ್ದ ಹುಡುಗ ಇವನಾಗಿದ್ದಾನೆ ಎಂದು ಹೇಳಿದರು. ಹುಝೂರ್(ಅ) ಅಗ ಮಲಗಿದ್ದರು. ಇದನ್ನು ಕೇಳಿದ ತಕ್ಷಣ ಎದ್ದು ಕುಳಿತುಕೊಂಡು ಹೇಳಿದರು "ಈ ಪುಟ್ಟ ಮಗುವಿಗೆ ಆ ಗಡ್ಡಗಳ ಕಾಣಿಸಿತ್ತೇ?" ಈಗ ಅಲ್ಲಾಹನ ಅನುಗ್ರಹದಿಂದ ಆ ಮಗು ಯುವಕನಾಗಿದ್ದಾನೆ ಮತ್ತು ಆರೋಗ್ಯಕರವಾಗಿದ್ದಾನೆ.(ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ವರದಿ ಸಂಖ್ಯೆ–1348)

ಆತ್ಮೀಯ ಕೇಳುಗರೇ!! ಈಗ ನಾನು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರಾರ್ಥನೆ ಸ್ವೀಕೃತಿಯ ಪವಾಡವನ್ನು ಪ್ರಸ್ತುತಪಡಿಸುತ್ತೇನೆ ಇವತ್ತಿನವರೆಗೂ ಪ್ರಪಂಚದಲ್ಲಿ ಕಾಣದ ಉದಾಹರಣೆ ಹುಚ್ಚುನಾಯಿ ಕಚ್ಚಿ ಹುಚ್ಚು ಹಿಡಿತಕ್ಕೊಳಗಾದ ವ್ಯಕ್ತಿ ಚೇತರಿಸಿಕೊಂಡದ್ದನ್ನು ಜಗತ್ತು ಕಂಡಿಲ್ಲ ಆದರೆ ಮಸೀಹ್ ಮುಹಮ್ಮದಿಯವರ ಪ್ರಾರ್ಥನೆಯ ಈ ಪ್ರಸ್ತಾವನೆ ಹೀಗಿದೆ. ನಿಮ್ಮ ಪ್ರಾರ್ಥನೆಯೊಂದಿಗೆ ರೋಗಿಯು ಗುಣಮುಖರಾದರು.

ಈ ವರದಿಯನ್ನು ಸಿರತುಲ್ ಮಹದಿಯಲ್ಲಿ ವರದಿ ಸಂಖ್ಯೆ 1221 ರ ಅಡಿಯಲ್ಲಿ ಹಝ್ರತ್ ಮೀರ್ ಅಬ್ದುಲ್ ರಹಮಾನ್ ಸಾಹಿಬ್(ರ), ರೇಂಜ್ ಆಫೀಸರ್ ಬಾರಾ ಮುಲ್ಲಾ ಕಾಶ್ಮೀರವನ್ನು ಉಲ್ಲೇಖಿಸಿ ಉಲ್ಲೇಖಿಸಲಾಗಿದೆ, ಆದರೆ ಈ ವಿನೀತನು ಈ ಮಹೋನ್ನತವಾದ ದುಷ್ಟಾಂತವನ್ನು ಪ್ರಾರ್ಥನೆಯ ಸ್ವೀಕೃತಿಯ ಘಟನೆಯನ್ನು ಹಝ್ರತ್ ಮಸೀಹ್ ಮೌಊದ್ ಲಐಹಿಸ್ಸಲಾಮ್ ಅವರ ಪದಗಳಲ್ಲಿ ವಿವರಿಸಬೇಕು. ಹಝ್ರತ್ ಮಸೀಹ್ ಮವೂದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಈ ದಿನಗಳಲ್ಲಿ ಕಾಣಿಸಿಕೊಳ್ಳಬಹುದಾದ ಐದನೇ ಚಿಹ್ನೆಯು ಪ್ರಾರ್ಥನೆಯ ಅಂಗೀಕಾರವಾಗಿದೆ, ಈ ಸಾರಾಂಶದ ವಿವರಣೆ ಏನೆಂದರೆ, ಅಬ್ದುಲ್‌ಕರೀಂ ಹೆಸರು, ತಂದೆ ಅಬ್ದುರ್ರಹ್ಮಾನ್ ಹೈದರಾಬಾದ್ ದಖಿನ್ ನಿವಾಸಿ, ನಮ್ಮ ಮದರಸದಲ್ಲಿ ಒಬ್ಬ ವಿದ್ಯಾರ್ಥಿ, ವಿಧಿಯನ್ವಯ ಅವನಿಗೆ ಹುಚ್ಚು ನಾಯಿ ಕಡಿಯಿತು. ನಾವು ಅವನ ಚಿಕಿತ್ಸೆಗಾಗಿ ಕಸೋಲಿ ಕಳುಹಿಸಿದೆವು. ಕೆಲ ದಿನಗಳವರೆಗೆ ಕಸೋಲಿಯಲ್ಲಿ ಚಿಕಿತ್ಸೆ ನಡೆಯಿತು. ಮತ್ತೆ ಅವನು ಖಾದಿಯಾನಿಗೆ ಮರಳಿ ಬಂದನು. ಕೆಲವು ದಿನಗಳ ನಂತರ ಮತ್ತೆ ಅವನಲ್ಲಿ ಹುಚ್ಚುತನದ ಚಿಹ್ನೆಗಳು ಗೋಚರಿಸಿದವು. ಅದು ಹುಚ್ಚು ನಾಯಿ ಕಡಿತದಿಂದ ಉಂಟಾಗುತ್ತವೆ. ನೀರು ನೋಡಿ ಹೆದರತೊಡಗಿದ ಸ್ಥಿತಿ ಗಂಭೀರವಾಯಿತು. ಆಗ ಆ ಪರದೇಶಿಯ ಮೇಲೆ ನನಗೆ ಮರುಕ ಹುಟ್ಟಿದಂತಾಯಿತು. ಅವನಿಗಾಗಿ ಪ್ರಾರ್ಥನೆಯ ಒಂದು ವಿಶೇಷ ಆಸಕ್ತಿ ಮೂಡಿತು. ಪ್ರತಿಯೊಬ್ಬರು ಆ ವ್ಯಕ್ತಿ ಕೆಲವು ಗಂಟೆಗಳಲ್ಲಿ ಸಾಯಬಹುದು ಅನ್ನುತ್ತಿದ್ದರು. ನಿರ್ವಾಹವಿಲ್ಲದೇ ಅವನಿಗೆ ಬೋರ್ಡಿಂಗ್‌ನಿಂದ ಹೊರಗೆ ಬಂದು ಪ್ರತ್ಯೇಕ ಮನೆಯಲ್ಲಿ ಇರಿಸಿದರು. ಕಸೋಲಿಯ ಬ್ರಿಟಿಷ್ ವೈದ್ಯರಿಗೆ ತಂತಿ ಸಂದೇಶ ಮೂಲಕ ಕೇಳಲಾಯಿತು. ಅವನಿಗಾಗಿ ಏನಾದರೂ ಚಿಕಿತ್ಸಾ ಕ್ರಮವಿದೆಯೇ ಎಂದು. ಅಲ್ಲಿಂದ ಉತ್ತರ ಬಂತು. ಈಗ ಅವನಿಗಾಗಿ ಯಾವ ಚಿಕಿತ್ಸೆಯೂ ಇಲ್ಲ. ನನ್ನ ಮನಸ್ಸಿನಲ್ಲಿ ಕಳವಳ ಉಮಟಾಯಿತು. ನನ್ನ ಮಿತ್ರರು ಸಹ ಅವನ ಕುರಿತು ದುಆ ಮಾಡಲು ಪ್ರೇರೇಪಿಸಿದರು. ಏಕೆಂದರೆ ಆ ಬಡವನ ಸ್ತಿತಿ ಕರುಣಾಜನಕವಾಗಿತ್ತು. ನನ್ನ ಮನಸ್ಸಿನಲ್ಲಿಯೂ ಭಯ ಉಂಟಾಯಿತು. ಒಂದು ವೇಳೆ ಇವನು ತೀರಿ ಹೋದರೆ ನಮ್ಮ ವಿರೋಧಿಗಳು ಕೆಟ್ಟ ರೀತಿಯಲಿ ಬಳಸಿಕೊಲ್ಲುವರು. ಆಗ ನನ್ನ ಮನಸ್ಸಿನಲ್ಲಿ ತುಂಬ ಕಳವಳ ಅಸಮಾಧಾನ ಉಂಟಾಯಿತು. ಮತ್ತು ಅಸಾಮಾನ್ಯ ರೀತಿಯ ಗಮನಹರಿಸಿದಂತಾಯಿತು. ಅದು ನನ್ನದ್ದಾಗದೇ ದೇವನಾಗ್ರಹದಂತಿತ್ತು. ಇಂತಹ ಸ್ಥಿತಿ ಅಲ್ಲಾಹನ ಅನುಗ್ರಹದಿಂದ ಉಂಟಾಗುತ್ತದೆ ಆಗ ಆ ಮೃತನನ್ನು ಜಿವಂತಗೊಳಿಸಲು ಪ್ರಾರ್ಥನೆಯ ಮೊರೆ ಹೋದೆ. ಅವನ ಸ್ಥಿತಿ ಮೃತನಂತೆಯೇ ಇತ್ತು. ಅವನು ನೀರಿನಿಂದ ಮತ್ತು ಬೆಳಕಿನಿಂದ ಹೆದರಿ ಓಡಿ ಹೋಗುತ್ತಿದ್ದ. ತಕ್ಷಣದಿಂದಾಗಿ ಸ್ಥಿತಿ ಪಲ್ಲಟಗೊಂಡಿತು. ಈಗ ಆರೋಗ್ಯವಾಯಿತು. ಅವನು ಹೇಳಿದ. ಈಗ ನನಗೆ ನೀರಿನಿಂದ ಹೆದರಿಕೆ

ಆಗುತ್ತಿಲ್ಲ. ಅಗ ಅವನಿಗೆ ಕೊಡಲಾಯಿತು. ಅವನು ಏನೂ ಹೆದರಿಕೆಯಿಲ್ಲದೇ ನೀರು ಕುಡಿದನು. ಅಲ್ಲದೇ ನೀರಿನಿಂದ ವುಝು ಮಾಡಿ ನಮಾಝ್ ನಿರ್ವಹಿಸಿದನು. ರಾತ್ರಿಯೆಲ್ಲ ಸರಿಯಾಗಿ ನಿದ್ರೆ ಮಾಡಿದನು. ಮತ್ತು ಎಲ್ಲ ರೀತಿಯ ಹುಚ್ಚುತನ ಹಾಗೂ ಭಯ ದೂರವಾಯಿತು. ಕೆಲ ದಿನಗಳ ನಂತರವೇ ಪರಿಪೂರ್ಣ ಆರೋಗ್ಯದಂತನಾದನು. ನನ್ನ ಮನಸ್ಸಿನಲ್ಲಿ ಹಾಕಲಯಿತು.ಈ ಹಚ್ಚುತನದ ಸ್ಥಿತಿ ಅವನನ್ನು ನಾಶಗೊಳಿಸಲು ಆಗಿರಲಿಲ್ಲ. ಬದಲು ಅಲ್ಲಾಹನ ದೃಷ್ಟಾಂತಕ್ಕಾಗಿ ಈ ಸ್ಥಿತಿ ಉಂಟಾಗಿತ್ತು. (ರೂಹಾನಿ ಖಝಾಈನ್, ಸಂಪುಟ–22, ಹಖೀಖತುಲ್ ವಹಿ ಪುಟ 470–471) (ಖುತ್ಬಾತೆ ಮಹ್ಮೂದ್, ಸಂಪುಟ–1, ಪುಟ–124)

ಆತ್ಮೀಯ ಕೇಳುಗರು!! ಅಬ್ದುಲ್–ರಹಮಾನ್ ಅವರ ತಂದೆ ಅಬ್ದುಲ್–ಕರೀಮ್ ಸಾಹಿಬ್ ಇವರು ಕರ್ನಾಟಕದ ತಿಮ್ಮಾಪುರ್ ಎಂಬ ಹಳ್ಳಿಯ ನಿವಾಸಿಯಾಗಿದ್ದರು, ಅಲ್ಲಿ ಅಲ್ಹಮ್ದುಲಿಲ್ಲಾಹ್ ಅವರು ನಿಷ್ಠಾವಂತ ಜಮಾಅತ್ ಇದೆ.

ಪ್ರಿಯ ಶ್ರೋತೃಗಳೇ!! ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರಾರ್ಥನೆಗಳನ್ನು ಸ್ವೀಕೃತಿಯ ಘಟನೆಗಳು ಬಹಳಷ್ಟಿವೆ. ಅವುಗಳನ್ನು ಈ ಅಲ್ಪಾವಧಿಯಲ್ಲಿ ವಿವರಿಸಲು ಸಾಧ್ಯವಿಲ್ಲ. ಹುಝೂರ್ ಅಲೈಹಿಸ್ಸಲಾಮ್ ಅವರ ದುಆವಿನ ಕಾರಣದಿಂದ ರೋಗಿಗಳು ಗುಣಮುಖರಾದರು, ಚಿಕಿತ್ಸೆ ಇಲ್ಲದ ರೋಗಿಗಳು ಗುಣಮುಖರಾದರು. ಮರಣಕ್ಕೆ ಸಮೀಪಿಸಿದವರೂ ಪುನಃ ಜೀವಂತರಾದರು, ಮಕ್ಕಳಿಲ್ಲದವರಿಗೆ ಮಕ್ಕಳೊಂದಿಗೆ ಅನುಗ್ರಹಿಸಲಾಯಿತು, ಆದರೆ ಹುಝೂರ್ ಅಲಯಹಿಸ್ಸಲಾಮ್ ಅವರು ಮಕ್ಕಳಿಗಾಗಿ ದುಆ ಕೇಳುವವರಿಗೆ ಹೇಳುತ್ತಿದ್ದರು: "ಹಝ್ರತ್ ಝಕರೀಯಾ(ಅ) ಅವರು ತೌಬ ಮಾಡಿದ ರೀತಿಯಲ್ಲಿ ತೌಬ ಮಾಡಿರಿ ಮತ್ತು ಮಗುವಿಗೆ ಇಸ್ಲಾಮ್ ಧರ್ಮದ ಸೇವೆಗಾಗಿ ಅರ್ಪಿಸಿ." ಹಝ್ರತ್ ಮುನ್ಷಿ ಅತ್ತಾ ಮುಹಮ್ಮದ್ ಸಾಹಿಬ್ ಪಟ್ವಾರಿ(ರ.ಅ) ಅವರು ಹೇಳುತ್ತಾರೆ: ನಾನು ಅಹ್ಮದಿಯೇತನಾಗಿದ್ದಾಗ ಗುರುದಾಸ್‌ಪುರ ಜಿಲ್ಲೆಯ ವಾಂಜ್ವಾಂನಲ್ಲಿ ಪಟವಾರಿಯಾಗಿದ್ದಾಗ. ನಾನು ಭೇಟಿಯಾಗಬೇಕಿದ್ದ ಖಾಜಿ ನಿಮತುಲ್ಲಾ ಸಾಹಿಬ್ ಖತೀಬ್ ಬಟಾಲ್ವಿ ಅವರು ಹಝ್ರತ್ ಸಾಹಿಬ್ ಅವರ ಬಗ್ಗೆ ಸಾಕಷ್ಟು ಬೋಧಿಸುತ್ತಿದ್ದರು. ಆದರೆ ನಾನು ಅವರ ಮಾತುಗಳಿಗೆ ಗಮನ ನೀಡುತ್ತಿರಲಿಲ್ಲ. ಒಂದು ದಿವಸ ಅವರು ನನಗೆ ತುಂಬಾ ಕಿರುಕುಳ ಕೊಟ್ಟರು, ಆಗ ನಾನು ವರಿಗೆ ಹೇಳಿದೆ, ನಾನು ನಿಮ್ಮ ಮಿರ್ಝಾಗೆ ಪತ್ರ ಬರೆಯುತ್ತೇನೆ. ನಾನು ಒಂದು ವಿಷಯಕ್ಕಾಗಿ ದುಆ ಮಾಡಲು ಕೇಳೀಕೊಳ್ಳುತ್ತೇನೆ ಆ ಕೆಲಸ ಮಾಡಿದರೆ, ಅವರು ಅತ್ಯಾವಂತರು ಎಂದು ನಾನು ಓಪ್ಪಿಕೊಳ್ಳುತ್ತೇನೆ. ತದನಂತರ ನಾನು ಹಝ್ರತ್ ಸಾಹಿಬ್ ಅವರಿಗೆ ಪತ್ರವನ್ನು ಬರೆದೆ, ನೀವು ವಾಗ್ದಾತ್ತ ಮಸೀಹ್ ಹಾಗೂ ವಲೀವುಲ್ಲಾಹ್ ಆಗಿರುವರು ಎಂದು ದಾವೆ ಮಾಡುತ್ತೀರ, ವಲೀವುಲ್ಲಾಹ್ ಆದವರ ದುಆಗಳು ಸ್ವೀಕರಿಸಲಾಗುತ್ತದೆ. ಆದ್ದರಿಂದ, ನೀವು ನನಗೋಸ್ಕರ ದುಆ ಮಾಡಿರಿ ಅದೇನೆಂದರೆ ಸರ್ವಶಕ್ತನಾದ ಅಲ್ಲಾಹನು ನನ್ನ ಪತ್ನಿಯರಲ್ಲಿ ಒಂದು ಸುಂದರವಾದ ಗಂಡು ಮಗು ನೀಡುವಂತೆ ದುಆ ಮಾಡಿರಿ. ಕೆಳಗೆ ನಾನು ನಾನು ಮೂರು ಹೆಂಡತಿಯರನ್ನು ಹೊಂದಿದ್ದೇನೆ ಎಂದು ಬರೆದಿದ್ದೆ, ಆದರೆ ಮದುವೆ ಆಗಿ ಹಲವು ವರ್ಷಗಳಾಗಿವೆ ಆದರೆ ಅವರಲ್ಲಿ ಯಾರೂ ಮಕ್ಕಳನ್ನು ಹೊಂದಿಲ್ಲ. ಹಿರಿಯ ಪತ್ನಿಯ ಗರ್ಭದಿಂದ ನನಗೆ ಗಂಡು ಜನಿಸಬೇಕು ಎಂದು ಬಯಸುತ್ತೇನೆ. ಅದಕ್ಕೆ ಪ್ರತಿಕ್ರೀಯೆಯಾಗಿ ಹಝ್ರತ್ ಸಾಹಿಬ್ ಅವರ ಪರವಾಗಿ, ದಿವಂಗತ ಮೌಲ್ವಿ ಅಬ್ದುಲ್ ಕರೀಂ ಸಾಹಿಬ್ ಅವರಿಂದ ಒಂದು ಲಿಖಿತ ಪತ್ರ ಲಭಿಸಿತು ಅಂದರೆ ಅಲ್ಲಾಹನ ಸನ್ನಿಧಿಯಲ್ಲಿ ದುಆ ಮಾಡಲಾಗಿದೆ, ನೀವು ಬಯಸಿದ ಃಆಗೆ ನಿಮ್ಮ ಹಿರಿಯ ಪತ್ನಿಯಿಂದ ಅಲ್ಲಾಹನು ನಿಮಗೆ ಸುಂದರವಾದ ಗಂಡು ಮಗುವನ್ನು ನೀಡುವನು, ಆದರೆ ನೀವು ಝಕರೀಯ(ಅ) ಅವರ ತೌಬದ ಹಾಗೆ ತಭ ಮಾಡಬೇಕು. ಮುನ್ಶಿ ಅತ್ತಾ ಮುಹಮ್ಮದ್ ಸಾಹಿಬ್ ಹೇಳೂತ್ತಾರೆ ಆ ದಿನಗಳಲ್ಲಿ ನಾನು ತುಂಬಾ ಅಧರ್ಮೀಯನಾಗಿದ್ದೆ, ಮದ್ಯಪಾನ ಮುಂತಾದ ಕೆಟ್ಟ ಅಭ್ಯಾಸಗಳಲ್ಲಿ ತೊಡಗಿಕೊಂಡಿದ್ದೆ. ನಾನು ಮಸೀದಿಯ ಮುಲ್ಲಾ ಸಾಹೇಬರಿಗೆ ಝಕರೀಯ ಅವರ ತೌಬ ಹೇಗಾಗುತ್ತದೆ? ಎಂದು ಕೇಳಿದೆ. ಆಗ ಜನರು ಈ ಸೈತಾನನು ಮಸೀದಿಯ ಒಳಗೆ ಹೇಗೆ ಪ್ರವೇಶಿಸಿದನು ಎಂದು ಆಶ್ಚರ್ಯಪಟ್ಟರು. ಆದರೆ ಆ ಮುಲ್ಲಾ ನನಗೆ ಉತ್ತರ ನೀಡಲಿಲ್ಲ. ತದನಂತರ ನಾನು ಧರಮ್‌ಕೋಟ್‌ನ ಅಹ್ಮದಿ ಮೌಲ್ವಿ ಫತೇಹ್ ದೀನ್ ಸಾಹಿಬ್ ಅವರನ್ನು ಕೇಳಿದೆ, ಅವರು ಹೇಳಿದರು, ಝಕರೀಯ ಅವರ ತೌಬ ಅಂದರೆ ಅಧರ್ಮವನ್ನು ತ್ಯಜಿಸಬೇಕು, ಹಲಾಲ್ ಅನ್ನು ಸೇವಿಸಬೇಕು, ನಮಾಝ್ ಹಾಗೂ ಉಪವಾಸವನ್ನು ಅನುಷ್ಠಿಸಬೇಕು ಮತ್ತು ಮಸೀದಿಗೆ ಕಡ್ಡಾಯವಾಗಿ ಬರುತ್ತಿರಬೇಕು. ಇದನ್ನು ಆಲಿಸಿ ನಾನು ಹೀಗೆ ಮಾಡಲು ಪ್ರಾರಂಭಿಸಿದೆ. ಮದ್ಯಪಾನ ಮುಂತಾದ ಎಲ್ಲಾ ಕೆಡಕುಗಳನ್ನು ತ್ಯಜಿಸಿ ಕಡ್ಡಾಯವಾಗಿ ನಮಾಝ್, ಉಪವಾಸಗಳನ್ನು ಅನುಷ್ಠಿಸಲು ಪ್ರಾರಂಭಿಸಿದೆ. ನಾಲ್ಕೈದು ತಿಂಗಳ ನಂತರ ನಾನು ಒಂದು ದಿವನ ಮನೇಗೆ ಹೋದಾಗ ನನ್ನ ಹಿರಿಯ ಪತ್ನಿ ಅಳುತ್ತಿದ್ದಳು. ಕಾರಣ ಕೇಳಿದಾಗ ಮೊನ್ನೆ ನನಗೆ ಮಕ್ಕಳಾಗಲಿಲ್ಲ ಎಂದು ಈ ತೊಂದರೆ ಇತ್ತು, ಅದರ ಮೇಲೆ ನೀವು ನನ್ನ ಮೇಲೆ ಇನ್ನಿಬ್ಬರು ಪತ್ನಿಯರನ್ನು ಮಾಡಿಕೊಂಡೆ. ಈಗ ನನ್ನ ಮುಟ್ಟು ನಿಂತುಹೋಗಿದೆ ಎಂಬ ತೊಂದರೆ ಬಂದಿದೆ. (ಮಕ್ಕಳು ಜನಿಸುವುದು ಎಂಬುದರ ಮೇಲೆ ಭರವಸೆಯೇ ಇಲ್ಲವಂತೆ) ಆ ಕಾಲದಲ್ಲಿ ಅವರ ಓರ್ವ ಸಹೋದರ ಅಮೃತ್ಸರದಲ್ಲಿ ಪೋಲೀಸ್ ಅಧಿಕಾರಿಯಾಗಿದ್ದರು. ಅದಕ್ಕೆ ಅವಳು ನನಗೆ ನನ್ನ ಸಹೋದರನ ಬಳಿ ಕಳುಹಿಸಿ ಕೊಡಿ ನಾನು ಅಲ್ಲಿ ಹೋಗಿ ಚಿಕಿತ್ಸೆ ಮಾಡಿಸಿಕೊಳ್ಳುತ್ತೇನೆ ಎಂದು ಕೇಳಿಕೊಂಡಳು. ಅಲ್ಲಿ ಹೋಗುವ ಅವಶ್ಯಕತೆ ಇಲ್ಲ ಇಲ್ಲಿಯೇ ಯಾವುದಾದರು ಸೂಲಗಿತ್ತಿಯನ್ನು ಕರೆಸಿ ಪರಿಶೀಲಿಸಿ ಅದಕ್ಕೆ ಚಿಕಿತ್ಸೆ ಮಾಡಿಸೋಣ ಎಂದು ಹೇಳಿದೆ. ಹಾಗಾಗಿ ಸೂಲಗಿತ್ತಿಯನ್ನು ಕರೆದು ಏನಾದರು ಔಧಿಯನ್ನು ನೀಡಿ ಎಂದು ಹೇಳಿದೆ. ಆ ಸೂಲಗಿತ್ತಿ ಸಾಧಾರಣವಾಗಿ ಆತುರದಿಂದ ಪರಿಶೀಲಿಸಿ ನಾನು ಔಷಧಿ ಕೊಡುವುದಿಲ್ಲ ಮತ್ತು ಮುಟ್ಟುವುದಿಲ್ಲ. ಏಕೆಂದರೆ ಅಲ್ಲಾಹನು ನಿನ್ನಲ್ಲಿ ಮರೆತಿದ್ದಾನೆ ಎಂದು ನನಗೆ ತೋರುತ್ತದೆ (ಅಂದರೆ ನೀವು ಗರ್ಭಿಣಿಯಾಗಿದ್ದಿರಿ ನಿಮ್ಮ ಹೊಟ್ಟೆಯಲ್ಲಿ ಮಗುವಿದ್ದ ಹಾಗೆ ಭಾಸವಾಗುತ್ತಿದೆ. ಆದ್ದರಿಂದ ಅಲ್ಲಾಹನು ನಿನ್ನನ್ನು (ನೌಝುಬಿಲ್ಲಾಹ್) ಮರೆತು ಗರ್ಭಿಣಿಯಾಗಿಸಿದ್ದಾನೆ–ಲೇಖಕ) ಅವಳು ಮನೆಯ ಹೊರಗೆ ಬಂದ ನಂತರವೂ ಅಲ್ಲಾಹನು ಮರೆತಿದ್ದಾನೆ ಎಂದು ಹೇಳಲು ಪ್ರಾರಂಭಿಸಿದಳು, ಆದರೆ ನಾನು ಅವಳಿಗೆ ಹೇಳಿದೆ ಹೀಗೆ ಹೇಳಬೇಡ ಏಕೆಂದರೆ ನಾನು ಮಿರ್ಝಾ ಸಾಹಿಬ್ ಅವರನ್ನು ದುಆ ಮಾಡಲು ಕೇಳಿಕೊಂಡಿದ್ದೆ, ನಂತರ ಮುನ್ಶಿ ಸಾಹಿಬ್ ವಿವರಿಸುತ್ತಾರೆ, ಸ್ವಲ್ಪ ಸಮಯದ ನಂತರ ಗರ್ಭಾವಸ್ಥೆಯ ಎಲ್ಲಾ ಲಕ್ಷಣಗಳು ಕಾಣಿಸಿಕೊಂಡವು ಮತ್ತು ನಾನು ಸುತ್ತಮುತ್ತಲಿನ ಎಲ್ಲರಿಗೂ ಹೇಳಲು ಪ್ರಾರಂಭಿಸಿದೆ, ಈಗ ನೋಡಿ, ನನ್ನ ಮನೆಯಲ್ಲಿ ಗಂಡು ಹುಡುಗ ಜನಿಸುತ್ತಾನೆ ಮತ್ತು ಅವನು ಸುಂದರವಾಗಿರುತ್ತಾನೆ, ಆದರೆ ಜನರು ತುಂಬಾ ಆಶ್ಚರ್ಯಪಟ್ಟರು ಮತ್ತು ಹೀಗಾದರೆ, ನಿಜವಾಗಿಯೂ ಇದು ಬಹು ದೊಡ್ಡ ಪವಾಡವಾಗಿದೆ. ಕೊನೆಗೆ ಒಂದು ದಿನ ರಾತ್ರಿ ಸುಂದರವಾದ ಗಂಡು ಹುಡುಗ ಜನಿಸಿತು. ಆ ಸಮಯದಲ್ಲಿ ನಾನು ಧರ್ಮಕೋಟ್‌ಗೆ ಓಡಿಹೋದೆ. ಅಲ್ಲಿ ನನ್ನ ಬಂಧುಗಳು ಅನೇಕರು ಇದ್ದರು ನಾನು ಅವರಿಗೆ ಪುತ್ರನ ಜನ್ಮದ ಬಗ್ಗೆ ಜನರಿಗೆ ತಿಳಿಸಿದೆ, ಆ ಸಮಯದಲ್ಲಿ ಬೈಅತ್ ಮಾಡಲು ಅನೇಕ ಜನರು ಖಾದಿಯಾನ್‌ಗೆ ತೆರಳಿದರು, ಆದರೆ ಕೆಲವರು ಹೋಗಲಿಲ್ಲ, ಮತ್ತು ಈ ಘಟನೆಯ ನಂತರ ವಂಜ್ವಾಂನ ಸುಮಾರು ಜನರು ಬೈಅತ್ ಮಾಡಿದರು ನಾನು ಸಹ ಬೈಅತ್ ಮಾಡಿದೆ. ಮತ್ತು ಹುಡುಗನಿಗೆ ಅಬ್ದುಲ್ ಹಕ್ ಎಂದು ಹೆಸರಿಸಲಾಯಿತು. ನಾನು ಮದುವೆಯಾಗಿ ಹನ್ನೆರಡು ವರ್ಷಗಳಿಗೂ ಹೆಚ್ಚು ಕಾಲವಾಗಿತ್ತು ಆದರೆ ಮಕ್ಕಳು ಆಗಿರಲಿಲ್ಲ ಎಂದು ಮುನ್ಶಿ ಸಾಹಿಬ್ ಹೇಳುತ್ತಾರೆ. ಅಲ್ಲದೆ ಮುನ್ಷಿ ಸಾಹಿಬ್ ಹೇಳುತ್ತಾರೆ: ನಾನು ಖಾದಿಯಾನ್‌ಗೆ ಬಂದಾಗ ಮಸೀದಿಗೆ ಹೋಗುವ ದಾರಿಯನ್ನು ಆ ದಿನಗಳಲ್ಲಿ ಗೋಡೆ ನಿರ್ಮಿಸಿ ನಿರ್ಬಂಧಿಸಲಾಗಿತ್ತು. ನಾನು ತೋಟದಲ್ಲಿ ಹಝ್ರತ್ ಸಾಹೇಬರಿಗೆ ನನ್ನ ಕನಸನ್ನು ತಿಳಿಸಿದೆ, ಅಂದರೆ ನನ್ನ ಕೈಯಲ್ಲಿ ಕತ್ತರಿಸಿದ ಕಲ್ಲಂಗಡಿ ಹಣ್ಣಿದೆ ಅದನ್ನು ನಾನು ತಿಂದಾಗ ಅದು ಬಹಳ ಸಿಹಿಯಾಗಿತ್ತು ಆದರೆ ನಾನು ಅದರ ಒಂದು ತುಂಡನ್ನು ಅಬ್ದುಲ್ ಹಕ್‌ಗೆ ಕೊಟ್ಟಾಗ ಅದು ಒಣಗಿತು. ಹಝ್ರತ್ ಸಾಹಿಬ್ ಅವರು ಆ ಕನಸ್ಸನ್ನು ವ್ಯಾಖ್ಯಾನಿಸುತ್ತ ಹೇಳಿದರು, ಅಬ್ದುಲ್ ಹಕ್‌ನ ತಾಯಿಯಿಂದ ಇನ್ನೊಬ್ಬ ಮಗುವಿನ ಜನನವಾಗುತ್ತದೆ ಆದರೆ ಅವನು ಮರಣ ಹೊಂದುತ್ತಾನೆ. ತದನಂತರ ಮುನ್ಷಿ ಸಾಹಿಬ್ ಹೇಳುತ್ತಾರೆ ಮತ್ತೊಂದು ಹುಡುಗ ಜನಿಸಿತ್ತು ಆದರೆ ಅವನು ಮರಣ ಹೊಂದಿದನು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೇಳುತ್ತಾರೆ 1922 ರಲ್ಲಿ ಸುಮಾರು 20 ವರ್ಷ ವಯಸ್ಸಿನವನಾಗಿದ್ದ ಅಬ್ದುಲ್ ಹಕ್ ಅನ್ನು ನಾನು ಸುಂದರ ಮತ್ತು ಸಭ್ಯ ಹುಡುಗನಾಗಿ ನೋಡಿದ್ದೇನೆ. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ವರದಿ ಸಂಖ್ಯೆ–241)

ಆತ್ಮೀಯ ಕೇಳುಗರೆ! ಹಝ್ತರ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರಾರ್ಥನೆಗಳ ಮೂಲಕ, ಧರ್ಮಕ್ಕೆ ಧೃಢವಾದ ಶಕ್ತಿಯನ್ನು ಲಭಿಸಿದೆ ಮತ್ತು ಭಯಭೀತಿಯನ್ನು ಶಾಂತಿಯಿಂದ ಬದಲಾಯಿಸಲಾಗಿದೆ. ನಿಮ್ಮ ಪ್ರಾರ್ಥನೆಯಿಂದ ಕೆಲವು ಹಳ್ಳಿ ಹಳ್ಳಿಗಳು ಅಹ್ಮದೀಯರಾಗಿದ್ದಾರೆ. ನಾಸಿರಾಬಾದ್ ಕಾಶ್ಮೀರದ ಅನೇಕ ಅಹ್ಮದಿಯರು ಈ ಅನುಗ್ರಹದಾಯಕ ಜ್ಲಸ ಸಾಲಾನದಲ್ಲಿ ಕುಳಿತಿದ್ದಾರೆ. ಈ ವರದಿಯೂ

ಅವರಿಗೆ ಮತ್ತು ನಮ್ಮೆಲ್ಲರಿಗೂ ಬಹಳ ಈಮಾನ್ ವರ್ಧಕವಾಗಿದೆ.

ಕಾಶ್ಮೀರದ ನಿವಾಸಿ ಹಝ್ರತ್ ಖ್ವಾಜಾ ಅಬ್ದುಲ್ ರಹಮಾನ್ ಸಾಹಿಬ್ ಹೇಳುತ್ತಾರೆ: ಕಾಶ್ಮೀರದ ಶುರ್ತ್ ನಿವಾಸಿಯಾದ ಮೌಲ್ವಿ ಕುತುಬುದ್ದೀನ್ ಸಾಹಿಬ್ ಅವರು ಹೇಳುತ್ತಿದ್ದರು, ನಾನು ಅಹ್ಮದಿಯಾದಾಗ ಆರಂಭಕಾಲದಲ್ಲಿ ಶುರ್ತ್‌ನಲ್ಲಿ ಬೇರೆ ಯಾರು ಅಹ್ಮದಿ ಇರಲಿಲ್ಲ. ಹಾಗಾಗಿ ನನ್ನ ವಿರೋಧ ಶುರುವಾಯಿತು. ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸೇವೆಯಲ್ಲಿ ವಿರೋಧದ ಬಗ್ಗೆ ಪತ್ರವನ್ನು ಕಳುಹಿಸಿದೆ ಮತ್ತು ದುಆಗಾಗಿ ವಿನಂತಿಸಿದೆ. ಅದಕ್ಕೆ ಹುಝೂರ್ ಅಲೈಹಿಸ್ಸಲಾಮ್ ಅವರು ಹೀಗೆ ಉತ್ತರಿಸಿದರು: ತಾಳ್ಮೆಯಿಂದ ಇರಿ, ಅಲ್ಲಿಯೂ ಅನೇಕ ಜನರು ಈಮಾನ್ ತರುತ್ತಾರೆ. ಖ್ವಾಜಾ ಅಬ್ದುಲ್ ರಹಮಾನ್ ಸಾಹಿಬ್ ಹೇಳುತ್ತಾರೆ, ಶುರ್ತ್‌ನ ಜನರು ಇನ್ನೂ ನಂಬಿರಲಿಲ್ಲ, ಆದರೆ ಪಕ್ಕದ ಮುಸೋಮ ಕನಿಪುರ ಗ್ರಾಮದ (ಈ ಗ್ರಾಮದ ಹೆಸರು ಈಗ ನಾಸಿರಾಬಾದ್ ಎಂದಾಗಿದೆ) ಸಂಪೂರ್ಣ ಜನರು ಅಹ್ಮದೀಯತ್‌ಗೆ ಸೇರ್ಪಡೆಯಾದರು. ಮತ್ತು ಅಲ್ಲಿನ ಪ್ರದೇಶದಲ್ಲಿ ಅಹ್ಮದಿಯಾತ್ ಅನೇಕ ಸ್ಥಳಗಳಲ್ಲಿ ಹರಡಿತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೇಳುತ್ತಾರೆ ಖ್ವಾಜಾ ಸಾಹಿಬ್ ಆತುರ ಪಡುತ್ತಾರೆ. ಹಝ್ರತ್ ಸಾಹಿಬ್ ಹೀಗೆ ಹೇಳಿದ್ದಾರೆ ಎಂದಾದರೆ ಶುರ್ತ್ ಸಹ ಉಳಿಯುವುದಿಲ್ಲ. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ವರದಿ ಸಂಖ್ಯೆ–825) ಅಲ್ಹಮ್ದುಲಿಲ್ಲಾಹ್ ಈ ಸಮಯದಲ್ಲಿ ಶುರ್ತ್‌ನಲ್ಲಿ ಅನೇಕ ಅಹ್ಮದಿ ಮನೆಗಳು ಇವೆ.

ಮೊಹಲ್ಲಾ ದಾರುಲ್ ಫಝ್ಲ್‌ನ ಅಂಗಡಿಯ ವ್ಯಾಪಾರಿ ಹಝ್ರತ್ ಮಿಯಾನ್ ಫಝ್ಲ್ ಮುಹಮ್ಮದ್ ಸಾಹಿಬ್(ರ) ಹೇಳುತ್ತಾರೆ: ಒಮ್ಮೆ ದುಆದ ಬಗ್ಗೆ ಒಂದು ಪ್ರಶ್ನೆ ಸಂಭವಿಸಿತು. ಹುಝೂರ್ ಅಲೈಹಿಸ್ಸಲಾಮ್ ಹೇಳಿದರು, "ದುಆ ಮುಮಿನ್‌ನ (ವಿಶ್ವಾಸಿಗಳ) ಆಯುಧವಾಗಿದೆ. ದುಆವನ್ನು ಎಂದಿಗೂ ಬಿಡಬಾರದು, ಬದಲಿಗೆ, ದುಆವಿನಿಂದ ಆಯಾಸಗೊಳ್ಳಬಾರದು. ಜನರು ಕೆಲವು ದಿನಗಳವರೆಗೆ ಪ್ರಾರ್ಥಿಸಿ ನಂತರ ಅದನ್ನು ತ್ಯಜಿಸುವ ಅಭ್ಯಾಸವನ್ನು ಹೊಂದಿದ್ದಾರೆ. ಹುಝೂರ್ ಅಲೈಹಿಸ್ಸಲಾಮ್ ಅವರು ಪ್ರಾರ್ಥನೆಯ ಉದಾಹರಣೆಯನ್ನು ಬಾವಿಯಿಂದ ನೀಡಿದ್ದಾರೆ ಅಂದರೆ ಒಬ್ಬ ಮನುಷ್ಯನು ಬಾವಿಯನ್ನು ತೋಡುತ್ತಾನೆ, ನೀರು ಹತ್ತಿರ ಬಂದಾಗ, ಅವನು ಹತಾಶೆಯಿಂದ ಅದನ್ನು ಬಿಡುತ್ತಾನೆ. ಅವನು ಒಂದು ಗೇಣು ತೋಡುತ್ತಿದ್ದರೆ ಅದರಿಂದ ನೀರು ಹರಿಯುತ್ತಿತ್ತು. ಅದರಿಂದ ಅವನು ತನ್ನ ಗುರಿಯನ್ನು ಸಾಧಿಸಬಹುದಾಗಿತ್ತು ಮತ್ತು ಅವನು ಯಶಸ್ವಿಯಾಗುತ್ತಿದ್ದನು. ಹೀಗೆ ಪ್ರಾರ್ಥನೆಯ ಕೆಲಸವೆಂದರೆ ಒಬ್ಬ ವ್ಯಕ್ತಿಯು ಕೆಲವು ದಿನಗಳವರೆಗೆ ಪ್ರಾರ್ಥಿಸುತ್ತಾನೆ ಮತ್ತು ನಂತರ ಬಿಟ್ಟುಬಿಡುತ್ತಾನೆ ಹೀಗೆ ವಿಫಲನಾಗುತ್ತಾನೆ. (ಸೀರತುಲ್ ಮಹದಿ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ವರದಿ ಸಂಖ್ಯೆ–1249)

ಆತ್ಮೀಯ ಕೇಳುಗರೇ!! ನಾವು ಅದೃಷ್ಟವಂತರಾಗಿದ್ದೇವೆ, ಸರ್ವಶಕ್ತನಾದ ಅಲ್ಲಹನು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಂತರ ನಮ್ಮ ಧಾರ್ಮಿಕ ಮತ್ತು ಲೌಕಿಕ ಉಳಿವು ಮತ್ತು ಪ್ರಗತಿಗಾಗಿ ಅಲ್ಲಾಹನು ನಮಗೆ ಖಿಲಾಫತ್ ಅಹ್ಮದಿಯಾ ಎಂಬಂತಹ ಮಹಾನ್ ಅನುಗ್ರಹವನ್ನು ನೀಡಿದ್ದಾನೆ. ಮತ್ತು ಖಿಲಾಫತೆ ಅಹ್ಮದಿಯಾ ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪರಿಪೂರ್ಣ ಪ್ರತಿಬಿಂಬವಾಗಿದೆ ಎಂಬುದು ಸ್ಪಷ್ಟವಾಗಿದೆ. ಇಂದಿಗೂ, ಈ ಆಧ್ಯಾತ್ಮಿಕ ಖಲೀಫತ್ ಮೂಲಕ, ಅರ್ವಶಕ್ತನಾದ ಅಲ್ಲಾಹನು ಪ್ರಾರ್ಥನೆಗಳ ಸ್ವೀಕೃತದ ಲಕ್ಷಣಗಳನ್ನು ತೋರಿಸುತ್ತಾನೆ. ಮತ್ತು ಅಹ್ಮದೀಯರು ಹಾಗೂ ಅಹ್ಮದೀಯೇತರು ಖಲೀಫರ ಪ್ರಾರ್ಥನೆಯಿಂದ ಅನುಗ್ರಹಗಳನ್ನು ಪಡೆಯುತ್ತಿದ್ದಾರೆ. ವಿಶೇಶವಾಗಿ ಪಂಚಮ ಖಲೀಫರ ಈ ಕಾಲಘಟ್ಟವು ಪ್ರಾರ್ಥನೆಗಳ ಕಾಲವೇ ಆಗಿದೆ. ಹಝ್ರತ್ ಅಖ್ದಸ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) (ಜಮಾಅತ್‌ನ ಪಂಚಮ ಖಲೀಫರು) ಖಿಲಾಫತ್‌ನ ಪೀಠದ ಮೇಲೆ ಆಸೀನರಾದಾಗ ಮೊಟ್ಟ ಮೊದಲು ಹೀಗೆ ಉಪದೇಶಿಸಿದರು: **"ಜಮಾಅತ್‌ನ ಸದಸ್ಯರಲ್ಲಿ ಕೇವಲ ಒಂದೇ ಒಂದು ವಿನಂತಿಸುತ್ತೇನೆ ಇತ್ತೀಚಿನ ದಿನಗಳಲ್ಲಿ ದುಆವಿನ ಕಡೆಗೆ ತುಂಬ ಗಮನ ನೀಡಿರಿ. ದುಆಗಳಿಗೆ ಒತ್ತುನೀಡಿ. ದುಆಗೆ ಒತ್ತುನೀಡಿ. ಬಹಳಷ್ಟು ದುಆ ಮಾಡುತ್ತಾ ಇರಿ. ಸರ್ವಶಕ್ತನಾದ ಅಲ್ಲಾಹನು ಸಹಾಯ ನೀಡಲಿ ಮತ್ತು ಅಹ್ಮದೀಯತ್‌ನ ಈ ಕಾರವಾನ್ ತನ್ನ ಪ್ರಗತಿಯನ್ನು ಮುಂದುವರಿಸುತ್ತಾ ಇರಲಿ– ಆಮೀನ್"** (ಬದರ್, 29 ಏಪ್ರಿಲ್ 2003, ಪುಟ–15)

ಈಗ ಹಝ್ರತ್ ಅಮೀರುಲ್ ಮೊಮಿನೀನ್(ಅತಬಿಅ) ಮತ್ತು ಜಮಾಅತ್‌ನ ನಿಷ್ಠಾವಂತ ಜನರ ಪ್ರಾರ್ಥನೆಗಳನ್ನು ಸರ್ವಶಕ್ತನಾದ ಅಲ್ಲಾಹನು ಹೇಗೆ ಸ್ವೀಕರಿಸಿದನು ಮತ್ತು ಖಿಲಾಫತ್ ಖಮಿಸದ ಈ ಅನುಗ್ರಹದಾಯಕ ಅವಧಿಯಲ್ಲಿ ಅಲ್ಲಾಹನು ತನ್ನ ಅನುಗ್ರಹಗಳನ್ನು ಹೇಗೆ ಸುರಿದನು ಎಂಬುದಕ್ಕೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ. **ಅಲ್ಲಾಹುಮ್ಮಝಿದ್ ವ ಬಾರಕ್** ಹಝ್ರತ್ ಅಮೀರುಲ್ ಮುಮಿನೀನ್[ಅತಬಿಅ]ರವರು ದುಆವಿನ ಸ್ವೀಕೃತಿಯ ಘಟನೆಗಳನ್ನು ತಮ್ಮ ಭಾಷಣಗಳಲ್ಲಿ ಉಲ್ಲೇಖಿಸುತ್ತಾರೆ.

ಸರ್ವಶಕ್ತನಾದ ಅಲ್ಲಾಹನು ನಮ್ಮೆಲ್ಲರನ್ನು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಲ್ಲಾಹನಲ್ಲಿ ನಂಬಿಕೆ ಹಾಗೂ ದುಆವಿನ ಉಲ್ಲೇಖಗಳ ಬೆಳಕಿನಲ್ಲಿ ಜೀವನವನ್ನು ನಡೆಸಲು ತೌಫೀಖ್ ನೀಡಲಿ.– ಆಮೀನ್

**ವಆಖಿರುದ್ದಾಅ್‌ವನ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್[ಅ]ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್[ಅತಬಿಅ]ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003) **(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಹುಝೂರ್ ಅನ್ವರ್(ಅತಬಿಅ) ಹೇಳಿದರು. ಮಸೀದಿ ನಿರ್ಮಿಸಲಾಗಿದೆ ಎಂದರೆ ಅದು ಏಕದೇವನ ಆರಾಧನೆಗಾಗಿ ನಿರ್ಮಿಸಲ್ಪಟ್ಟಿದೆ. ಮಸೀದಿ ನಿರ್ಮಿಸಲಾಗಿದೆ ಎಂದರೆ ಅದು ಈ ಕ್ಷೇತ್ರದಲ್ಲಿ ಶಾಂತಿ, ಪ್ರೀತಿ ಸಹೋದರತೆಗಾಗಿ ನಿರ್ಮಿಸಲ್ಪಟ್ಟಿದೆ. ಮಸೀದಿ ನಿರ್ಮಿಸಲಾಗಿದೆ ಎಂದರೆ ಇಲಲಿಂದ ಈಗ ಪ್ರೀತಿ ಸ್ನೇಹ, ಸಹೋದರತೆಯ ಸದ್ದು ಪಸರಿಸುವುದು, ನಾವು ಎಲ್ಲ ರೀತಿಯಿಂದಲೂ ನಮ್ಮ ನೆರೆಯುವರ ಬಗ್ಗೆ ಕಾಳಜಿ ವಹಿಸುವವರಾಗುವೆವು ಮತ್ತು ಸಹಕಾರ ನೀಡುವವರಾಗುವೆವು.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಮೇಯರ್ ಸಾಹೇಬರಿಗೂ ಕೃತಜ್ಞತೆ ಅರ್ಪಿಸುತ್ತೇನೆ, ಅವರು ತಮ್ಮ ಮಿತೃತ್ವದ ಹಕ್ಕನ್ನು ಪಾಲಿಸಿದ್ದಾರೆ. ನಾನು ಮಸೀದಿಯ ಉದ್ಘಾಟನೆಗಾಗಿ ಎಲ್ಲೆಲ್ಲಿ ಹೋಗಿರುವೆವು, ಅಲ್ಲಲ್ಲಿ ಅವರು ಸಹ ಆಗಮಿಸುತ್ತಿದ್ದರು. ಹಿಂದೆ ಬಂದಾಗಲೂ ಕೂಡ ಅವರು ಭೇಟಿಯಾಗಿದ್ದರು. ಅವರಿಗೆ ಎಲ್ಲಾ ಮಾತುಗಳು ನೆನಪು ಸಹ ಇದ್ದವು. ಅವರು ತುಂಬಾ ಪ್ರೀತಿಯ ಭಾವವನ್ನು ಸಹ ವ್ಯಕ್ತಪಡಿಸಿದ್ದಾರೆ. ಈ ದೆಸೆಯಿಂದಲೂ ನಾನು ಅವರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಇವರು ನಮ್ಮ ಜಮಾಅತನ್ನು ತುಂಬಾ ಗೌರವಿಸುತ್ತಾರೆ ಮತ್ತು ನಮ್ಮ ಜೊತೆ ತುಂಬಾ ಸಹಕಾರ ನೀಡುತ್ತಿದ್ದಾರೆ.

ಹುಝೂರ್ ಅನ್ವರ್(ಅತಬಿಅ) ಹೇಳಿದರು. ಮಸೀದಿಯು ಒಂದು ನಗರಮಧ್ಯದಲ್ಲಿ ನಿರ್ಮಿಸಲ್ಪಟ್ಟಿದೆ. ಇಲ್ಲಿ ವಾಣಿಜ್ಯ ಉದ್ದಿಮೆಗಳು ಹೆಚ್ಚಿವೆ, ಪೇಟೆಗಳಿವೆ ಲೋಕದ ಭೌತಿಕ ವಸ್ತುಗಳ ವ್ಯಾಪಾರ ಹೆಚ್ಚಿದೆ. ಆದರೂ ಇಂತಹ ಜಾಗದಲ್ಲಿ ಧರ್ಮದ ಪ್ರತಿನಿಧಿತ್ವವು ಇರಬೇಕಾಗಿದೆ. ಏಕೆಂದರೆ ಇದರಿಂದ ನಿಜವಾದ ಆಧ್ಯಾತ್ಮಿಕ ಶಿಕ್ಷಣದ ಅರಿವು ಸಹ ಲೋಕಕ್ಕೆ ಆಗಬೇಕಾಗಿದೆ. ಅಲ್ಲಾಹನು ತನ್ನ ದಾಸರಿಗೆ ಎಲ್ಲಾ ವಸ್ತುಗಳನ್ನು ನೀಡುತ್ತಿದ್ದಾನೆ, ಅದರಿಂದ ಪ್ರಯೋಜನ ಪಡೆಯಲಿ. ತಮ್ಮ ಸೃಷ್ಟಿಕರ್ತನನ್ನು ಸಹ ಕೃತಜ್ಞರಾಗಿರಲಿ, ಈ ಪೈಕಿಯು ನೆನಪಿರುವಂತಾಗಲಿ. ಏಕೆಂದರೆ ನಮಗೆ ಇಸ್ಲಾಂ ನೀಡುವ ಶಿಕ್ಷಣವೇನೆಂದರೆ ನೀವು ಅಲಾಹನಿಗೆ ಸೃಷ್ಟಿಕರ್ತನಿಗೆ ಕೃತಜ್ಞರಾಗಿದ್ದರೆ ಅಲ್ಲಾಹನು ಇನ್ನೂ ಹೆಚ್ಚು ಅನುಗ್ರಹಿಸುವನು. ಆದ್ದರಿಂದ ಈ ನಿಟ್ಟಿನಲ್ಲಿ ನಾವು ಇಂತಹ ಭೌತಿಕ ಸ್ಥಳಗಳಲ್ಲಿ ಮಸೀದಿ ನಿರ್ಮಾಣ ಮಾಡುವುದು ಉತ್ತಮ ಎಂದು ಭಾವಿಸುತ್ತೇನೆ. ಯಾವುದೇ ಧರ್ಮದ ಪ್ರತಿನಿಧಿತ್ವ ಮತ್ತು ಅವರ ಆರಾಧನಾ ಸ್ಥಳವಿರುವುದು ಅವಶ್ಯವೆಂದು ಭಾವಿಸುತ್ತೇವೆ. ಏಕೆಂದರೆ ಅವರು ಕೇವಲ ಭೌತಿಕ ಪ್ರಪಂಚದಲ್ಲಿ ಮುಳುಗಿರಬಾರದು. ಬದಲು ಅಲ್ಲಾಹನನ್ನು ಸಹ ಸ್ಮರಿಸಬೇಕು, ತಮ್ಮ ಸೃಷ್ಟಿಕರ್ತನನ್ನು ಸಹ ಸ್ಮರಿಸಬೇಕು ಮತ್ತು ಅವನ ಆರಾಧನೆಯ ಹಕ್ಕನ್ನು ಸಹ ಪಾಲಿಸುವವರಗಬೇಕು. ನನಗೆ ಭರವಸೆ ಇದೆ. ಇನ್‌ಶಾಅಲ್ಲಾಹ್ ಈ ಮಸೀದಿ ನಿರ್ಮಾಣದಿಂದಾಗಿ ಅಹ್ಮದಿಯರು ಅವರ ಬಗ್ಗೆ ಹೆಚ್ಚಿನವರು ತುಂಬಾ ಒಳ್ಳೆಯ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಇನ್ನು ಹೆಚ್ಚಿ ಉತ್ತಮರಾಗಬಹುದು. ಈ ಮಸೀದಿಯ ಒಂದು ಶಾಂತಿ ಪ್ರೀತಿ ಮತ್ತು ಸ್ನೇಹದ ಪ್ರತೀಕವಾಗಿ ಈ ಕ್ಷೇತ್ರದಲಿ ಗುರುತಿಸಿಕೊಳ್ಳಲಾಗುವುದು.

Niddatal ನ ಮೇಯರ್ ಸಾಹೇಬ್ ಬಂದಿದ್ದರು. ಅವರಿಗೂ ಕೃತಜ್ಞತೆ ಹೇಳಿದರು. ಅವರು ಸಹ ತಮ್ಮ ಶುಭ ಭಾವನೆಗಳನ್ನು ವ್ಯಕ್ತಪಡಿಸಿದರು, ಸಂಸತ್ ಸದಸ್ಯರು ಸಹ ಬಂದಿದ್ದರು. ಅವರಿಗೂ ಕೃತಜ್ಞತೆ ವ್ಯಕ್ತಪಡಿಸಿದರು. ಅವರು ವ್ಯಕ್ತಪಡಿಸಿದ ಭಾವನೆಗಳ ಪ್ರಕಾರ ನಿಜವಾಗಿಯೂ ನಮಗೆ ಶಾಂತಿ ನೆಮ್ಮದಿಯ ಅವಶ್ಯಕತೆ ಇದೆ. ಲೋಕವು ವಿನಾಶದೆಡೆ ಹೋಗುತ್ತಿದೆ, ವಿನಾಶದೆಡೆ ಹೋಗಲು ಕಾರಣವೇನೆಂದರೆ ನಾವು ನಮ್ಮ ಸೃಷ್ಟಿಕರ್ತನನ್ನು ಮರೆತುಬಿಟ್ಟೆವು. ಭೌತಿಕತೆಯಲ್ಲಿ ಮುಳುಗಿ ಹೋದೆವು. ತಮ್ ಸ್ವಾರ್ಥವೇ ಮೇಲೆಂದು ಭಾವಿಸಿದ್ದೇವೆ. ಇತರರ ಹಕ್ಕುಗಳ ಬಗ್ಗೆ ನಮಗೆ ಗಮನವಿಲ್ಲ. ಅದರ ಪರಿಣಾಮ ಹೀಗೇ ಆಗಬೇಕಿತ್ತು ಮತ್ತು ಆಗುತ್ತಿದೆ. ಒಬ್ಬರು ಮೊತ್ತೊಬ್ಬರ ಮೇಲೆ ಹಿಂಸೆಯನ್ನು ಸಾಧಿಸುತ್ತಿದ್ದಾರೆ.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನಮಗೆ ಈ ಉಪದೇಶ ನೀಡಿದೆ. ನೀವು ನನ್ನ ದಾಸರ ಹಕ್ಕುಗಳನ್ನು ಈಡೇರಿಸದಿದ್ದರೆ ನನಗೆ ಅರ್ಪಿಸುವ ಆರಾಧನೆಗಳು ಸಹ ನಿಮ್ಮ ಮುಖಕ್ಕೆ ಬಸಾಡಿಸಲಾಗುವುದು ಮರಳಿಸಲಾಗುವುದು, ನೀವು ಅನಾಥರ ಬಗ್ಗೆ ಕಾಳಜಿವಹಿಸದಿದ್ದರೆ ನಿಮ್ಮ ಪ್ರಾರ್ಥನೆ ಮತ್ತು ಆರಾಧನೆಗಳು ಸ್ವೀಕಾರರ್ಹವಲ್ಲ, ನೀವು ಅಗತ್ಯವಿದ್ದವರನ್ನು, ಬಡವರನ್ನು ಕಡೆಗಾಣಿಸಿದರೆ ನಿಮ್ಮ ಆರಾಧನೆಗಳು ಮತ್ತು ಪ್ರಾರ್ಥನೆಗಳು ಸ್ವೀಕಾರವಾಗುವುದಿಲ್ಲ, ಮಸೀದಿಯು ನಮಗೆ ನೀಡುವ ಶಿಕ್ಷಣವೆಂದರೆ ನೀವು ಅಲ್ಲಾಹನಿಗೆ ಆರಾಧಿಸಲು ಬಂದವರಾದರೆ ಮೊದಲು ಜನರ ಹಕ್ಕುಗಳನ್ನು ಪಾಲಿಸಿ ಬನ್ನಿರಿ. ಅನಾಥರಿಗೂ ಕಾಳಜಿವಹಿಸಿ, ಬಡವರ ಬಗ್ಗೆಯೂ ಕಾಳಜಿಯಿರಲಿ, ಅಗತ್ಯವಿರುವವರನ್ನು ವಿಚಾರಿಸಿ, ಆಗ ನನ್ನ ಬಳಿಗೆ ಬನ್ನಿ, ನನ್ನ ಮಸೀದಿಯಲ್ಲಿ ಬನ್ನಿ, ಆರಾಧಿಸಲು ಬನ್ನಿ, ಆಗ ನಾನು ನಿಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸುವೆನು. ಆದ್ದರಿಂದ ಮಸೀದಿಯು ನಮಗೆ ಸೃಷ್ಟಿಕರ್ತ ಮತ್ತು ಸೃಷ್ಟಿಯ ಹಕ್ಕುಗಳನ್ನು ಈಡೇರಿಸುವ ಕಡೆ ನಮ್ಮ ಗಮನ ಸೆಳೆಯುತ್ತದೆ.

ಸಂಸತ್ ಸದಸ್ಯರೊಬ್ಬರು ಹೇಳಿದರು: ಲೋಕದಲ್ಲಿ ಅತ್ಯಾಚಾರವಾಗುತ್ತಿದೆ, ಚರ್ಚ್ ಕೆಡವಿ ಹಾಕಲಾಗುತ್ತದೆ, ಮಸೀದಿಗಳನ್ನು ಧ್ವಂಸ ಮಾಡಲಾಗುತ್ತದೆ, ಒಂದು ಪಂಥ ಇನ್ನೊಂದು ಪಂಥದೊಡನೆ ಭಿನ್ನಮತ ಹೊಂದಿದ ಕಡೆ, ಒಂದು ಧರ್ಮ ಇನ್ನೊಂದು ಧರ್ಮದೊಡನೆ ಭಿನ್ನಮತ ಹೊಂದಿದ ಕಡೆ ಇಂತಹ ಘಟನೆಗಳು ಆಗುತ್ತಿವೆ. ದುರದೃಷ್ಟವಾಗಿ ಮುಸ್ಲಿಂ ದೇಶದಲ್ಲಿ ಈ ರೀತಿಯ ಹಿಂಸೆಗಳು ಹೆಚ್ಚು ಆಗುತ್ತಿವೆ. ಇಲ್ಲಿ ಯೂರೋಪಗಳಲ್ಲಿಯೂ ಕಂಡುಬರುತ್ತದೆ, ಉದಾಹರಣೆಗೆ ಯುದ್ಧವನ್ನು ಉದಾಹರಿಸಿದರು. ನಮಗೆ ಹಝ್ರತ್ ಪೈಗಂಬರ್(ಸ) ಉಪದೇಶ ನೀಡಿದ್ದೇನೆಂದರೆ, ಈ ಹಿಂಸೆಯ ಎದುರಾಗಿ ನಿಮ್ಮ ಧ್ವನಿಯನ್ನು ಎತ್ತಿ, ಹಿಂಸೆಗೆ ಒಳಗಾದವರನ್ನು ಸಹಕಾರ ನಿಡಿ, ಮತ್ತು ದೌರ್ಜನ್ಯಗಾರರನ್ನು ಸಹ ಸಹಕರಿಸಿ, ಆಗ ಸಹಾಬರು ಹಝ್ರತ್ ಪೈಗಂಬರ್(ಸ) ರವರಿಗೆ ಕೇಳಿದರು. ನಬಿವರ್ಯರೇ ನಾವು ಹಿಂಸೆಗೆ ಒಳಗಾದವರನ್ನು ಸಹಕರಿಸಬಹುದು. ಅವರನ್ನು ಹಿಂಸಿಸುವುದರಿಂದ ರಕ್ಷಿಸುವೆವು. ಆದರೆ ದೌರ್ಜನ್ಯ ಎಸಗುವವರಿಗೆ ಹೇಗೆ ಸಹಾಯ ನೀಡಲು ಸಾಧ್ಯ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅವಶ್ಯಕತೆಗಳನ್ನು ಹಿಂಸೆ ಮಾಡುವುದರಿಂದ ತಡೆಯಬೇಕು. ಏಕೆಂದರೆ ಅವರ ಹಿಂಸೆ ಹೀಗೆ ಮುಂದುವರೆದರೆ ಅವರು ಅಲ್ಲಾಹನ ಶಿಕ್ಷೆಗೆ ಗುರಿಯಾಗುವರು ಮತ್ತು ಇಹಪರರಲ್ಲಿ ನಷ್ಟ ಅನುಭವಿಸುವರು. ಆದ್ದರಿಂದ ಒಬ್ಬ ಧಾರ್ಮಿಕ ಮನುಷ್ಯನಾದವನು ಕೇವಲ ಇಹಲೋಕದ ಮೇಲೆ ದೃಷ್ಟಿ ಇರಿಸುವುದಿಲ್ಲ. ಬದಲು ಪರಲೋಕದ ಬಗ್ಗೆಯೂ ಚಿಂತಿಸುತ್ತಾನೆ, ಅವನಿಗೆ ಕೇವಲ ತಮ್ಮ ಚಿಂತೆ ಇರುವುದಿಲ್ಲ. ಇತರರಿಗೂ ಪರಲೋಕದ ಶಿಕ್ಷೆಯಿಂದ ರಕ್ಷಿಸುವ ಚಿಂತೆ ಇರುತ್ತದೆ. ಆದ್ದರಿಂದ ಅವರು ಆರಾಧನೆಯ ಹಕ್ಕು ಪಾಲಿಸುವ ಜೊತೆಯಲ್ಲಿ ಅವನ ದಾಸರ ಹಕ್ಕುಗಳನ್ನು ಪಾಲಿಸುವ ಕಡೆ ಗಮನವಿರುತ್ತದೆ. ಹಿಂಸೆಗೆ ಒಳಗಾದವರಿಗೆ ಮತ್ತು ದೌರ್ಜನ್ಯಗಾರರೂ ಇಬ್ಬರಿಗೂ ರಕ್ಷಿಸುವ ಚಿಂತೆ ಮಾಡುತ್ತಿದೆ.

ಹುಝೂರ್ ಅನ್ವರ್(ಅತಬಿಅ) ಹೇಳಿದರು. ಅಲ್ಲಾಹನು ಈ ಮಸೀದಿ ನಿಮಾಣ ಆದ ಮೇಲೆ ಇಲ್ಲಿ ವಾಸಿಸುವ ಅಹ್ಮದಿಯರಿಗೆ ಮೊದಲಿಗಿಂತ ಹೆಚ್ಚು ತಮ್ಮ ವ್ಯಕ್ತಿತ್ವ ವಿಕಸಿಸುವಂತಾಗಲಿ, ಪ್ರೀತಿ, ಸ್ನೇಹ, ಶಾಂತಿ ಮತ್ತು ಸಹೋದರತೆಯ ಪ್ರತೀಕವಾಗಿ ಬಾಳುವಂತಾಗಲಿ, ಈ ಬೋಧನೆಗಳನ್ನು ವೃದ್ಧಿಗೊಳಿಸುವವರಾಗಲಿ, ನಾವು ಪ್ರಪಂಚದಲ್ಲಿ ಶಾಂತಿ ಸ್ಥಾಪಿಸುವವರು, ಹಿಂಸೆ ಕೊನೆಗಾಣಿಸುವರು ಮತ್ತು ಹಿಂಸೆಯ ವಿರುದ್ಧ ಸದಾ ಧ್ವನಿ ಎತ್ತುವವರನ್ನಾಗಿ ಮಾಡಲಿ. ಅಲ್ಲಾಹನು ನಮಗೆಲ್ಲರಿಗೂ ಈ ಭಾಗ್ಯ ದಯಪಾಲಿಸು. ಆಮೀನ್.

ಹುಝೂರ್ ಅನ್ವರ್(ಅತಬಿಅ) ಅವರ ಈ ಭಾಷಣ 7 ಗಂಟೆ 7 ನಿಮಿಷದವರೆಗೆ ಜಾರಿಯಲ್ಲಿತ್ತು. ನಂತರ ಹುಝೂರ್ ಅನ್ವರ್(ಅತಬಿಅ) ದುಆ ಮಾಡಿಸಿದರು. ದುಆ ನಂತರ ಎಲ್ಲಾ ಅತಿಥಿಗಳಿಗೆ ಊಟ ನೀಡಲಾಯಿತು.

Florstadt ನಗರದ ಮೇಯರ್ Mr. Herbert unger ವೇದಿಕೆಯ ಮೇಲೆ ಬಲಭಾಗದೆಡೆ ಕುಳಿತುಕೊಂಡಿದದರು. ಹುಝೂರ್ ಅನ್ವರ್(ಅತಬಿಅ) ಪ್ರೀತಿಯಿಂದ ಅವರೊಡನೆ ಮಾತನಾಡುತ್ತಿದ್ದರು.

ಊಟವಾದ ನಂತರ ಮೇಯರ್ ಸಾಹೇಬರು ಅನುಮತಿ ಪಡೆದು ಹೊರಟು ಹೋದರೆ Niddatal ಮೇಯರ್ Michael Hann. ಹುಝೂರ್ ಅನ್ವರ್(ಅತಬಿಅ) ಅವರ ಬಲಭಾಗದೆಡೆ ಮತ್ತು ರಾಜ್ಯದ ಸಮಸದರು Tobles Utter ಸಾಹಿಬ್ ಹುಝೂರ್ ಅನ್ವರ್(ಅತಬಿಅ) ಅವರ ಎಡಭಾಗದೆಡೆ ಕುಳಿತಿದದರು. ಹುಝೂರ್ ಅನ್ವರ್(ಅತಬಿಅ) ಪ್ರೀತಿಯಿಂದ ಅವರಿಬ್ಬರ ಅತಿಥಿಗಳೊಡನೆಯೂ ಮಾತನಾಡಿದರು.

ಅನಂತರ ಕಾರ್ಯಕ್ರಮದ ಕೊನೆಯಲ್ಲಿ 8 ಗಂಟೆ 5 ನಿಮಿಷಕ್ಕೆ ಇಲ್ಲಿಂದ ಮರಳಿ ಬೈತುಸ್ಸುಬೂಹ್ ಹೊರಡಿದರು. 8:35 ಗಂಟೆಗೆ ಹುಝೂರ್ ಅನ್ವರ್(ಅತಬಿಅ) ಬೈತುಸುಬೂಹ್ ಆಗಮಿಸಿದರು.

ಹುಝೂರ್ ಅನ್ವರ್(ಅತಬಿಅ) ಕೆಲ ಸಮಯಕ್ಕಾಗಿ ತನ್ನ ವಸತಿಯತ್ತ ತೆರಳಿದರು. 9 ಗಂಟೆಗೆ ಹುಝೂರ್ ಅನ್ವರ್(ಅತಬಿಅ) ಆಗಮಿಸಿ ಮಗ್ರಿಬ್ ಇಶಾ ನಮಾಝ್ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್ ತನ್ನ ವಸತಿನಿಲಯಕ್ಕೆ ತೆರಳಿದರು.

**ಅತಿಥಿಗಳ ಅನಿಸಿಕೆಗಳು**

ಇಂದು ಈ ಸಮಾರಂಭದಲ್ಲಿ ಭಾಗವಹಿಸಿದ ಹಲವು ಅತಿಥಿಗಳು ತಮ್ಮ ಭಾವನೆಗಳನ್ನು ಅನಿಸಿಕೆಗಳನ್ನು ವ್ಯಕ್ತ ಮಾಡದಿರಲಿಲ್ಲ. ಇಲ್ಲಿ ಕೆಲವು ಅತಿಥಿಗಳ ಅನಿಸಿಕೆಗಳನ್ನು ಪ್ರಸ್ತುತಪಡಿಸಲಾಗುತ್ತಿದೆ.

Henbert unger ಸಾಹಿಬ್ Florstadt ನಗರದ ಮೇಯರ್ ಹೇಳುತ್ತಾರೆ: ನನಗೆ 8 ವರ್ಷ ಮೊದಲು ಅಡಿಗಲ್ಲು ಸಮಾರಂಭ

ಸಂದರ್ಭದಲ್ಲಿಯೂ ಭೇಟಿಯ ಅವಕಾಶ ಸಿಕ್ಕಿತ್ತು. ಆಗಲೂ ಸಹ ಹುಝೂರ್ ಅನ್ವರ್(ಅತಬಿಅ) ಅವರ ವ್ಯಕ್ತಿತ್ವ ತುಂಬ ಪ್ರಭಾವಪೂರ್ಣವಾಗಿತ್ತು.

ನನ್ನ ದೃಷ್ಟಿಯಲ್ಲಿ hiss holiness ಒಬ್ಬ ಅತ್ಯಂತ ಪ್ರೀತಿಯ ವ್ಯಕ್ತಿತ್ವಂಯುಳ್ಳವರಾಗಿದ್ದಾರೆ, ಅವರ ಜೊತೆ ಪ್ರೀತಿಯಿಂದ ಮಾತನಾಡಬಹುದಾಗಿದೆ. ಹುಝೂರ್ ಅನ್ವರ್(ಅತಬಿಅ) ವ್ಯಕ್ತಿತ್ವದ ನೆಲೆಯಲಿ ತುಂಬಾ ಗೌರವಾನ್ವಿತರಾಗಿರುವರು. ಅವರು ಇಷ್ಟು ಉನ್ನತ ಹುದದೆಯಲ್ಲಿದ್ದವರಾದರೂ ಸಹೃದಯಿಗಳಾಗಿದ್ದಾರೆ, ಧಾರ್ಮಿಕ ಮುಖಂಡರಾಗಿಯೂ ಲೌಕಿಕ ಜ್ಞಾನವು ಹೊಂದಿರುತ್ತಾರೆ.

ಹುಝೂರ್ ಅನ್ವರ್(ಅತಬಿಅ) ಇಂದಿನ ಭಾಷಣದಲ್ಲಿ ಹೇಳಿದ್ದರು. ಮುಸಲ್ಮಾನರಿಗೆ ಧರ್ಮವನ್ನು ರಕ್ಷಿಸುವ ಆಜ್ಞೆ ಇಲ್ಲದಿರುತ್ತಿದದರೆ ಇಲ್ಲಿಯವರೆಗೆ ಯಾವ ಧರ್ಮವು ಉಳಿದರುತ್ತಿರಲಿಲ್ಲ. ಅವರ ಈ ಮಾತಿಗೆ ನಾನು 100% ಸಹಮತ ಹೊಂದಿರುತ್ತೇನೆ. ಹುಝೂರ್ ಅನ್ವರ್(ಅತಬಿಅ) ಅವರ ಇಲ್ಲಿಯ ಆಗಮನ ನನಗೆ ಅತ್ಯಂತ ಗೌರವದ ವಿಷಯವಾಗಿದೆ.

Michel Hann ಸಾಹಿಬ್ ಜೋಡು ನಗರ Niddtal ನ ಮೇಯರ್ ಹೇಳುತ್ತಾರೆ. ಖಲೀಫರ ಜೊತೆಯಲ್ಲಿ ಅತ್ಯಮತ ರೋಚಕ ಮಾತುಕತೆ Agriculture ಕುರಿತು ಆಯಿತು. ಈ ಪೈಕಿ ನನಗೆ ಹೆಚ್ಚಿನ ಮಾಹಿತಿ ಹಂಚಿಕೊಳ್ಳುವಂತಾಯಿತು. ಖಲಿಫರು ನನಗೆ ತಿಳಿಸಿದರು. ಅವರು ಭೂಮಿಯ ವಿಸ್ತೀರ್ಣಕ್ಕಾಗಿ acres ಎಂದು ಬಳಸುತ್ತಾರೆ. ಅದರ ಬದಳಾಗಿ ಜರ್ಮನರು hectares ಎಂದು ಹೇಳುತ್ತಾರೆ. ಖಲೀಫರಿಗೆ ನಾವು ಇಲ್ಲಿ ಏನೇನೆಲ್ಲ ಬೆಳೆಸುತ್ತೇವೆ ಎನ್ನುವ ಬಗ್ಗೆ ತುಂಬಾ ಆಸಕ್ತಿ ಇತ್ತು. ಅವರು ವಿಚಾರಿಸಿದರು. ಯಾವ ರೀತಿಯ ಬೆಳೆಗಳನ್ನು ನೀವು ಬೆಳೆಸುತ್ತೀರಿ ಎಂದು. ಖಲೀಫರ ವ್ಯಕ್ತಿತ್ವ ನನಗೆ ಬಹಳ ಪ್ರಭಾವಪೂರ್ಣವಾಗಿದ್ದಿತ್ತು. ಇಂತಹ ಗೌರಾವಾನ್ವಿತ ವ್ಯಕ್ತಿಯೊಡನೆ ಭೇಟಿಯಾಗುವ ಭಾಗ್ಯ ದೊರೆತಿದ್ದು ನನ್ನ ಭಾಗ್ಯವಾಗಿದೆ. ನಮಗೆ ಪರಸ್ಪರ ವ್ಯವಹಾರಗಳನ್ನು ಬೆಳೆಸಲು ಪ್ರಯತ್ನಿಸುತ್ತಿರಬೇಕು ಎಂಬ ಮಾತು ತುಂಬಾ ಮೆಚ್ಚುಗೆಯಾಯಿತು. ಅವರ ಮಾತುಗಳು ಹೃದಯಸ್ಪರ್ಶಿಯಾಗಿವೆ ಮತ್ತು ತುಂಬಾ ಸಹಜ ರೀತಿಯದ್ದಾಗಿವೆ. ತಕ್ಷಣ ಅರ್ಥವಾಗುತ್ತವೆ. ನನಗೆ ಅವರ ಈ ಮಾತು ಆಶ್ಚರ್ಯಗೊಳಿಸುವಂತಿತ್ತು. ಅವರಿಗೆ ಇಸ್ಲಾಮಿನ ಶಿಕ್ಷಣದ ಅರಿವು ಎಷ್ಟೊಂದು ಆಳವಾಗಿದೆ, ನನಗೆ ಖಲೀಫರು ಹೇಳಿದ್ದು, ಮೊದಲು ಇತರರ ಹಕ್ಕುಗಳನ್ನು ಪಾಲಿಸಬೇಕು ಮತ್ತೆ ತಮ್ಮ ಹಕ್ಕುಗಳ ಬಗ್ಗೆ ಗಮನಹರಿಸಬೇಕು ಎಂಬ ಮಾತು ತುಂಬಾ ಮೆಚ್ಚುಗೆಯಾಯಿತು. ನನಗೆ ಖಲಿಫರ ಮಸೀದಿಯು ಮಾರ್ಕೆಟ್ ಬಳಿ ಇರುವ ಮಾತು ಮೆಚ್ಚುಗೆಯಾಯಿತು. ಕೆಲವು ಜನರು ಹೇಳುತ್ತಾರೆ. ಮಸೀದಿ ನಗರದ ಮಧ್ಯಭಾಗದಲ್ಲಿರಬೇಕಿತ್ತು ಎಂದು. ಆದರೆ ನಾನು ಈ ಮಾತಿನಿಂದ ಸಹಮತ ಹೊಂದುವುದಿಲ್ಲ. ಖಲೀಫರು ವ್ಯಕ್ತಪಡಿಸಿದ ವಿಚಾರ ತುಂಬಾ ಸರಿಯಾಗಿದೆ. ಇದುವೇ ಮಸೀದಿಗಾಗಿ ಉತ್ತಮ ಸ್ಥಳವಗಿದೆ. ಇಂದಿನಿಂದ ಆರು ನೂರು ವರ್ಷಗಳ ಹಿಂದೆ ಹೀಗೆ ಆಗುತ್ತಿತ್ತು. ದಿನನಿತ್ಯ ಕಾರ್ಯ ಮಾಡುವ ಖರೀದಿ ಮಾಡುವ ಜಾಗದಲ್ಲಿ ಚರ್ಚ್‌ಗಳು ಇರುತ್ತಿದ್ದವು. ಜನರು ತಮ್ಮ ದಿನನಿತ್ಯದ ಕಾರ್ಯಗಳ ಜೊತೆಯಲ್ಲಿ ಆರಾಧನೆ ಕಾರ್ಯಗಳು ಸಹ ಆರಾಮವಾಗಿ ಪಾಲಿಸುತ್ತಿದ್ದರು.

Tobiaas uttar ಸಾಹಿಬ್ ಅವರು ರಾಜ್ಯ ಅಸೆಂಬ್ಲಿಯ ಸದಸ್ಯರಾಗಿದ್ದರೆ. ಹೇಳಿದರು. ನನಗೆ ಕೆಲ ಅತಿಥಿಗಳ ಮುಂಚೆ Freidberg ನ ಮಸೀದಿಯ ಉದ್ಘಾಟನಾ ಸಂದರ್ಭದಲ್ಲಿ ಖಲೀಫತುಲ್ ಮಸೀಹರ ಭಾಷಣ ಆಲಿಸುವ ಭಾಗ್ಯ ದೊರಕಿತ್ತು. ಆದರೆ ಈ ಸಲ ತುಂಬಾ ಹತ್ತಿರದಿಂದ ನೋಡುವ ಮತ್ತು ಆಲಿಸುವ ಅವಕಾಶ ದೊರೆತಿದೆ. ಖಲೀಫರು ತುಂಬಾ ಮೌನ ಸ್ವಭಾವದವರಾಗಿ ಕಾಣುತ್ತಾರೆ. ಅವರು ಬಹಳ ಯೋಚನೆ ಮಾಡಿ ಸಮಯಕ್ಕೆ ತಕ್ಕುದಾದ ಪದಗಳನ್ನು ಆಯ್ಕೆ ಮಾಡುತ್ತಾರೆ, ಅವರ ದಿಧಾನ ಬಹಳ ಪ್ರಿಯವಾಗಿದೆ. ನನಗೆ ಮೆಚ್ಚುಗೆ ಆದ ಒಂದು ಮಾತು, ಅದೇನೆಂದರೆ ಅವರು ಕೇವಲ ಲಿಖಿತ ಭಾಷಣವನ್ನು ಓದಿ ಹೇಳಲಿಲ್ಲ. ಬದಲು ಎಲ್ಲ ಭಾಷಣಗಾರರ ಬಗ್ಗೆ ತಮ್ಮ ವ್ಯಾಖ್ಯಾನ ನೀಡಿದರು. ಅವರ ಪದಗಳು ತುಂಬಾ ಪ್ರಭಾವಪೂರ್ಣವಾಗಿದ್ದವು.

ಅವರು ಇಂದಿನ ಪರಿಸ್ಥಿತಿಗಳನ್ವಯ ಸ್ಪಷ್ಟಪಡಿಸಿದರು. ಇಂದಿನ ಭಯಂಕರವಾದ ಪರಿಸ್ಥಿತಿಯಲ್ಲಿ ನಮಗೆಯೇ ಏನಾದರೂ ಮಾಡಬೇಕಾಗಿದೆ, ಮುಖ್ಯವಾದ ಮಾತೇನಾಗಿತ್ತೆಂದರೆ, ವಿಶ್ವಾಸ ಹೊಂದಿದವರಿಗೆ ಇಂದು ಮುಖ್ಯ ಹೊಣೆ ಪಾಲಿಸಬೆಕಾಗಿದೆ, ನನಗೆ ಖಲೀಫರೊಡನೆ ಮಾತನಾಡುವ ಅವಕಾಶ ದೊರೆಯಿತು. ಅವರು ನನಗೆ ಈ ಮಾತನ್ನು ತಿಳಿಸಿದರು. ಅವರು ಎಲ್ಲಾ ಕಡೆ ಶಾಂತಿ ಸಂದೇಶ ತಲುಪಿಸುತ್ತಾರೆ ಮತ್ತು ಶಾಂತಿ ಸ್ಥಾಪನೆಗಾಗಿ ಪ್ರಯತ್ನಿಸುತ್ತಾರೆ.

(ಮುಂದುವರಿಯುವುದು)

"ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ."
"ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು."
(ಹಝ್‌ರತ್ ಪೈಗ಼ಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

## ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್‌ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ.

**(ಮಲ್‌ಫೂಝಾತ್, ಸಂಪುಟ–3, ಪುಟ–284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ©£Àæ¯ï Cj hÄÄgÀ ïgÀ ÀgÀÄ 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

**ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.**
(ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 13 June 2024, Issue No. 24

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ–23ರ ಉಳಿದ ಭಾಗ ಮುಂದುವರಿಸಲಾಗಿದೆ)*

ಅವರು ಹೇಳಿದರು. ಇಂತಹ ಜನರು ಧರ್ಮವನ್ನು ಸಂವಿಧಾನ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಅವರಿಗೆ ಧರ್ಮದಿಂದ ಯಾವ ಸಂಬಂಧವೇ ಇರುವುದಿಲ್ಲ. ಆದರೆ ಇಂತಹ ಕತ್ತಲೆ ಅವಸ್ಥೆಯಲ್ಲಿ ವಿಶೇಷ ರೀತಿಯಲ್ಲಿ ದೇವನ ಪ್ರಕಾಶದ ಅವಶ್ಯಕತೆ ಇರುತ್ತದೆ. ಪ್ರೀತಿ ಮತ್ತು ಶಾಂತಿಯ ಅಗತ್ಯತೆ ಇರುತ್ತದೆ. ಅಹ್ಮದಿಯಾ ಮುಸ್ಲಿಂ ಜಮಾಅತಿನಲ್ಲಿ ವಿಶೇಷವಾಗಿ ಈ ಗುಣಗಳು (Values) ಹೊಂದಿರುತ್ತಾರೆ. ನಮಗೆ ಪರಸ್ಪರ ಒಳಗೂಡಿ ಈ ಕಠಿಣ ಪರಿಸ್ಥಿತಿಳನ್ನು ಎದುರಿಸಬೇಕಾಗಿದೆ. ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಿಕೊಳ್ಳಬೇಕಾಗಿದೆ. ಮುಂದೆಯೂ ಸಹ ನಮಗೆ ಜರ್ಮನಿಯ ಸಂವಿಧಾನ ರೀತ್ಯಾ ಶಾಂತಿ ಮತ್ತು ಸಮಾನತೆ ಒಟ್ಟಾಗಿ ಪಾಲಿಸಬೇಕಾಗಿದೆ. ನಮ್ಮ ಸಂವಿಧನ ನಮ್ಮ ಪ್ರಜಾರಾಜ್ಯ ಪ್ರಣಾಲಿಕೆ ಪ್ರತಿಯೊಬ್ಬರಿಗೆ ಸ್ವಾತಂತ್ರ್ಯತೆ ನೀಡುತ್ತದೆ. ಆದರೆ ಈ ಸ್ವಾತಂತ್ರ್ಯವನ್ನು ಸರಿಯಾದ ರೀತಿಯಲ್ಲಿ ಬಳಸಲು ನಿರ್ಬಂಧಿಸುತ್ತದೆ. ಈ ಸ್ವಾತಂತ್ರ್ಯದ ಸದ್ಬಳಕೆ ಮಾಡಿಕೊಳ್ಳಬೇಕು. ಯಾವುದೇ ಗ್ರಂಥದ ಬಗ್ಗೆ ಚರ್ಚಿಸಿರಿ, ಅದರ ಕುರಿತು ಉಲ್ಲೇಖಿಸಿದಿರಿ. ಆದರೆ ಅದನ್ನು ಸುಡುವುದು ಮತ್ತು ಇತರರ ಭಾವನೆಗಳಿಗೆ ಧಕ್ಕೆ ತರುವುದು ಒಳ್ಳೆಯದಲ್ಲ.

ಕೊನೆಯಲ್ಲಿ ಅವರು ಹೇಳಿದರು. His holiness ನಮ್ಮ ನಡುವೆ ಮತ್ತೊಮ್ಮೆ ಆಗಮಿಸಿದರು. ನಮಗೆ ದೊರೆತ ಬಹುದೊಡ್ಡ ಗೌರವದ ಮಾತಾಗಿದೆ. ಮಸೀದಿಯು ದೇವನಾನುಗ್ರಹವಾಗಿರುತ್ತದೆ. ಇಲ್ಲಿ ಯಾವಾಗಲೂ ಸಮಾನತೆಯಿರಲಿ, ಜನರಿಗೆ ಸಹಕಾರ ಪರಸ್ಪರ ಒಳಿತನ್ನು ಪ್ರೇರೇಪಿಸುವಂತಾಗಲಿ, ದೇವನ ಪ್ರೀತಿ ನಮ್ಮಲ್ಲಿ ಮೂಡಿ ಬರಲಿ. ಧನ್ಯವಾದಗಳು.

ಅದಾದ ನಂತರ 6.25 ಗಂಟೆಗೆ ಹುಝೂರ್ ಅನ್ವರ್(ಅತಬಿಅ) ಭಾಷಣ ಪ್ರಾರಂಭಿಸಿದರು.

## ಹುಝೂರ್ ಅನ್ವರ್(ಅತಬಿಅ) ಅವರ ಭಾಷಣ ಸಂದರ್ಭ ಉದ್ಘಾಟನಾ ಸಮಾರಂಭ, ಮಸ್ಜಿದ್ ಮುಬಾರಕ್ Florstadt ಜರ್ಮನಿ

ತಶಹ್ಹುದ್ ಮತ್ತು ತಾವೂಝ್ ನಂತರ ಹುಝೂರ್ ಅನ್ವರ್(ಅತಬಿಅ) ನುಡಿದರು: ಎಲ್ಲಾ ಆದರಣೀಯ ಅತಿಥಿಗಳಿಗೆ, ಅಸ್ಸಲಾಮು ಅಲೈಕುಂ ವರಹಮತುಲ್ಲಾಹಿ ವ ಬರಕಾತುಹು!

ಈ ಕ್ಷೇತ್ರದಲ್ಲಿ ನಮಗೆ ಒಂದು ಮಸೀದಿಯನ್ನು ನಿರ್ಮಿಸುವ ಭಾಗ್ಯ ಪಡೆದುದಕ್ಕೆ ನಾವು ಅಲ್ಲಾಹನಿಗೆ ಕೃತಜ್ಞರಾಗಿದದೇವೆ. ಮಸೀದಿಯು ನಮ್ಮ ಧರ್ಮದನ್ವಯ ದೇವನಾನುಗ್ರಹವಾಗಿರುತ್ತದೆ. ಮಸೀದಿಯ ಜನರು ಒಟ್ಟುಗೂಡಿ ಏಕದೇವನ ಆರಾಧಿಸುವ ಸ್ಥಳವಾಗಿದೆ. ಅಲಾಹನು ನೀಡಿದ ಬೋಧನೆಯ ಪ್ರಾರ ಒಬ್ಬರು ಮತ್ತೊಬ್ಬರೊಡನೆ ಪ್ರೀತಿಸಬೇಕು. ಮತ್ತು ಉತ್ತಮವಾಗಿ ವ್ಯವಹರಿಸಬೇಕು.

ಮಸೀದಿಯ ರಕ್ಷಣೆ ಪ್ರತಿಯೊಬ್ಬ ಮುಸಲ್ಮಾನರ ಕರ್ತವ್ಯವಾಗಿದೆ. ಅದರ ಹಕ್ಕು ಪಾಲಿಸುವುದು ಪ್ರತಿಯೊಬ್ಬ ಮುಸಲ್ಮಾನರ ಕರ್ತವ್ಯವಾಗಿದೆ. ಅವನು ನಿಜವಾದ ಮುಸಲ್ಮಾನನಾಗಿದ್ದರೆ, ಮಸೀದಿಯ ಹಕ್ಕನ್ನು ಪಾಲಿಸದೆ, ಅಲ್ಲಾಹನ ಮತ್ತು ಜನರ ಹಕ್ಕನ್ನು ಪಾಲಿಸದಿರಲು ಸಾಧ್ಯವಿಲ್ಲ. ಎಲ್ಲಿ ಪವಿತ್ರ ಖುರ್‌ಅನ್ ಅವಿಶ್ವಾಸಿಗಳೊಡನೆ ಕಠೋರವಾಗಿ ವರ್ತಿಸುವ ಶಿಕ್ಷಣ ನೀಡಿದೆಯೋ. ಅಲ್ಲಿ ಮುಸಲ್ಮಾನರಿಗೆ ತಮ್ಮ ಧರ್ಮದ ರಕ್ಷಣೆ ಮಾಡಬೇಡಿ ಎಂದೇನು ಹೇಳಲಿಲ್ಲ. ಬದಲು ಹೇಳಿದ್ದು – ಯಾರು ಧರ್ಮದ ವಿರುದ್ಧವಾಗಿದ್ದಾರೆ, ಹಿಂಸೆ ಭಯವನ್ನುಂಟು ಮಾಡಬಯಸುತ್ತಾರೆ, ಯಾರು ಅಲ್ಲಾಹನ ವಿವಿಧ ಪ್ರವಾದಿಗಳ ಬೋಧನೆಗಳನ್ನು ಅಂತ್ಯಗೊಳಿಸಬಯಸುತ್ತಾರೆ, ಅವರ ವಿರುದ್ಧ ಮುಸಲ್ಮಾನರಿಗೆ ಒಟ್ಟಾಗಬೇಕಾಗಿ ಹೇಳುತ್ತದೆ. ಆದ್ದರಿಂದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. ಮುಸಲ್ಮಾನರಿಗೆ ಕೊಂದು ಹಾಕುವ ಅವಿಶ್ವಾಸಿಗಳೊಡನೆ ಮುಸಲ್ಮಾನರು ಕಠಿಣವಾಗಿ ಎದುರಿಸದಿದ್ದರೆ ಯಾವ ಚರ್ಚ್‌ಗಳು ಸಹ ಬಾಕಿಯಾಗಿ ಉಳಿಯುವುದಿಲ್ಲ, ಯಾವ Synagogue ಬಾಕಿಯಾಗಿ ಉಳಿಯುವುದಿಲ್ಲ, ಯಾವ ಮಂದಿರವು ಉಳಿಯುವುದಿಲ್ಲ, ಒಟ್ಟಿನಲ್ಲಿ ಅವರು ಧರ್ಮವಿರೋಧಿಗಳಾಗಿರುತ್ತಾರೆ. ಮತ್ತು ಅವರು ವಿವಿಧ ಪ್ರವಾದಿಗಳು ತಂದಿರುವ ಎಲ್ಲಾ ಧರ್ಮಗಳಿಗೆ ವಿರುದ್ಧವಾಗಿದ್ದಾರೆ.

ಆದ್ದರಿಂದ ಇಸ್ಲಾಂ ಧರ್ಮದ ಇದು ಮೂಲವಾದ ಶಿಕ್ಷಣ ಧರ್ಮವನ್ನು ರಕ್ಷಿಸಿಕೊಳ್ಳಬೇಕಾಗಿದೆ. ಮತ್ತು ಎಲ್ಲಾ ಧರ್ಮಗಳನ್ನು ಗೌರಿವಸಬೇಕಾಗಿದೆ. ಅದಕ್ಕಾಗಿಯೇ ನಾವು ಹೇಳುತ್ತೇವೆ. ನಾವು ಮೂಸಾ(ಅ) ಅವರಿಗೂ ಗೌರಿವಸುತ್ತೇವೆ. ಈಸಾ(ಅ) ರನ್ನು ಗೌರವಿಸುತ್ತೇವೆ, ಹಿಂದೂಗಳ ಪ್ರವಾದಿಗಳನ್ನು ಸಹ ಗೌರವಿಸುತ್ತೇವೆ, ಬುದ್ಧನನ್ನು ಸಹ ಗೌರವಿಸುತ್ತೇವೆ, ಒಟ್ಟಿನಲ್ಲಿ ಪ್ರವಾದಿಯಲ್ಲಿರುವ ಎಲ್ಲಾ ಧರ್ಮಗಳನ್ನು ಗೌರವಿಸುತ್ತೇವೆ. ಅಲ್ಲದೆ ನಮಗೆ ಆಜ್ಞಾಪಿಸಿ ನೀವು ಮಾನವರೆಲ್ಲರನ್ನು ಸಹ ಗೌರವಿಸಿ ಅವರನ್ನು ಆದರಿಸಿ ಅಲ್ಲದೆ ಪವಿತ್ರ ಖುರ್‌ಆನ್‌ನಲ್ಲಿದೆ, ವಿಗ್ರಹಗಳನ್ನು ಪೂಜಿಸುವವರಿಗೂ ಸಹ ಕೆಟ್ಟದಾಗಿ ಹೇಳಬೇಡಿ, ಅದರ ಪ್ರತಿಯಾಗಿ ಅವರು ಅಲ್ಲಾಹನಿಗೆ ಕೆಟ್ಟದಾಗಿ ಹೇಳಿದರೆ ಅದರ ಪರಿಣಾಮವಾಗಿ ಅಶಾಂತಿ ಹುಟ್ಟುವುದು, ಜಗಳಗಳುಂಟಾಗುವುದು. ಆದ್ದರಿಂದ ಇಸ್ಲಾಮಿನ ಶಿಕ್ಷಣವಿದೆ–ಮಸೀದಿಗಳು ಏಕದೇವನ ಆರಾಧನೆಗಾಗಿ ನಿರ್ಮಿಸಲಾಗುತ್ತದೆ, ಅದಕ್ಕಾಗಿ ನಾವು ಒಟ್ಟುಗೂಡುತ್ತೇವೆ. ಆದ್ದರಿಂದ ಎಲ್ಲರಿಗಾಗಿಯೂ ಇದು ನಮ್ಮ ಮೂಲಕ ಶಿಕ್ಷಣವಾಗಿದೆ.

ಹುಝೂರ್ ಅನ್ವರ್(ಅತಬಿಅ) ಹೇಳಿದರು. ಮಸೀದಿ ನಿರ್ಮಾಣ ಕಾರ್ಯದಿಂದಾಗಿ ಕೆಲವರಲ್ಲಿ ಹೆದರಿಕೆಯಿತ್ತು. ಅದಕ್ಕೆ ಕಾರಣವೇನೆಂದರೆ ಇಸ್ಲಾಮಿನ ಹೆಸರಿನಲ್ಲಿ ಅವರು ತಪ್ಪು ನಡವಳಿಕೆ ಹೊಂದಿದವರಾಗಿದ್ದರು. ತಪ್ಪು ಶಿಕ್ಷಣ ನೀಡುವವರಾಗಿದ್ದರು. ಇಸ್ಲಾಮಿನ ಶಿಕ್ಷಣ, ಪವಿತ್ರ ಖುರ್‌ಆನ್‌ನ ಶಿಕ್ಷಣ ಅಥವಾ ನಮ್ಮ ಪ್ರೀತಿಯ ಪವಿತ್ರ ಪ್ರವಾದಿಯ ಶಿಕ್ಷಣ ಅತ್ಯಂತ ಶಾಂತಿದಾಯಕ ಶಿಕ್ಷಣವಾಗಿದೆ, ಪ್ರೀತಿಯ ಶಿಕ್ಷಣವಾಗಿದೆ. ಸ್ನೇಹದ ಶಿಕ್ಷಣವಾಗಿದೆ, ಪವಿತ್ರ ಖುರ್‌ಆನ್ ಹೇಳುತ್ತದೆ. ನೆರೆಹೊರೆಯರ ಹಕ್ಕುಗಳನ್ನು ಪಾಲಿಸಿರಿ. ಕೇವಲ ನಮ್ಮ ಹತ್ತಿರದ ಮನೆಯವರು ಮಾತ್ರ ನಿಮ್ಮ ನೆರೆಯವನಲ್ಲ, ಬದಲು 40 ಮನೆಗಳವರೆಗೆ ಇರುವವರೆಲ್ಲರೂ ನಿಮ್ಮ ನೆರೆಹೊರೆಯವರಾಗಿದ್ದಾರೆ, ನಿಮ್ಮ ಜೊತೆ ಪ್ರಯಾಣಿಸುವವರು ಸಹ ನಿಮ್ಮ ನೆರೆಹೊರೆಯವರಾಗಿದ್ದಾರೆ, ನಿಮ್ಮ ಜೊತೆ ನಿಮ್ಮ ಕಾರ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುವವರು ಸಹ ನಿಮ್ಮ ನೆರೆಯವರಾಗಿದ್ದಾರೆ, ನಿಮ್ಮ ಜೊತೆ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವವರು ಸಹ ನಿಮ್ಮ ನೆರೆಯವರಾಗಿದ್ದಾರೆ, ಅವರನ್ನು ಗೌರವಿಸಿ, ಅವರನ್ನು ಆದರಿಸಿ, ಅಷ್ಟೇ ಅಲ್ಲ, ಹಝ್ರತ್ ಪೈಗಂಬರ್(ಸ) ನೆರೆಹೊರೆಯವರ ಹಕ್ಕುಗಳ ಬಗ್ಗೆ ಎಷ್ಟೊಂದು ಉಪದೇಶ ನೀಡಿದ್ದಾರೆಂದರೆ, ಸಾಹೇಬರು ಹೇಳುತ್ತಾರೆ. ಬಹುಶಃ ನಮ್ಮ ಆಸ್ತಿಗಳಲ್ಲಿಯೂ ನಮ್ಮ ನೆರೆಯವರ ಹಕ್ಕುವಿರಬಹುದು ಎಂಬುವಷ್ಟು ಕಲ್ಪನೆ ಮಾಡುತಿತ್ತು. ಇಲ್ಲಿಯತನಕ ಇಸ್ಲಾಂ ಧರ್ಮವು ತಮ್ಮ ನೆರೆಹೊರೆಯವರಿಗೆ ಹಕ್ಕನ್ನು ನೀಡುತ್ತದೆ. ಆದ್ದರಿಂದ ಒಬ್ಬ ಅಹ್ಮದಿ ಮುಸಲ್ಮಾನನಿಂದ ಅವರು ಯಥಾರ್ಥ ಹಾಗೂ ನಿಜವಾದ ಮುಸಲ್ಮಾನನಾಗಿದ್ದಾನೆ. ಅವನಿಂದ ಎಂದೂ ನೆರೆಯವನಿಗೆ ತೊಂದರೆಯಾಗಬಹುದೆಂದು ಊಹಿಸಲು ಸಾಧ್ಯವಿರಲಿಕ್ಕಿಲ್ಲ. ಆದ್ದರಿಂದ ಈ ಪೈಕಿ ನಾನು ಮತ್ತೊಮ್ಮೆ ಹೇಳಬಯಸುತ್ತೇನೆ ಮತ್ತು ಈ ಹಿಂದೆಯೂ ಹಲವು ಸಲ ಹೇಳಿರುತ್ತೇನೆ. ನಮ್ಮ ನೆರೆಹೊರೆಯವರಿಗೆ ಚಿಂತೆ ಮಾಡುವ ಅವಶ್ಯತಕೆ ಇಲ್ಲ.

*(ಪುಟ ಸಂಖ್ಯೆ–10ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.